بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 50

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**14 ಡಿಸೆಂಬರ್ 2023, 14 ಫತಹ್ 1402 ಹಿಜರಿ ಶಮ್‌ಸಿ,**
**29 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَرَاَ الْمُجْرِمُوْنَ النَّارَ
فَظَنُّوْٓا اَنَّهُمْ مُّوَاقِعُوْهَا
وَلَمْ يَجِدُوْا عَنْهَا مَصْرِفًا

**(ಅಲ್ ಕಹಫ್: 54)**

**ಅಂದರೆ: ಅಪರಾಧಿಗಳು ನರಗಾಗ್ನಿಯನ್ನು ದರ್ಶಿಸುವರು. ಆಗ ಅವರು ಅದರೊಳಗೆ ಬೀಳಲಿರುವುದಾಗಿ ಮನಗಾಣುವರು. ಅದರಿಂದ ತಪ್ಪಿಸಿಕೊಳ್ಳುವ ಯಾವ ದಾರಿಯನ್ನೂ ಅವರು ಕಾಣಲಾರರು.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ಓರ್ವ ಮುಸ್ಲಿಮನು ಇನ್ನೋರ್ವ ಮುಸ್ಲಿಮನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು.**

**(2442)** ಹಝ್‌ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್ (ಸ) ನುಡಿದರು: ಓರ್ವ ಮುಸ್ಲಿಮನು ಇನ್ನೋರ್ವ ಮುಸಲ್ಮಾನನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು. ಯಾವ ವ್ಯಕ್ತಿ ತನ್ನ ಸಹೋದರನ ಕೆಲಸದಲ್ಲಿ ತೊಡಗಿರುವವನು. ಅಲ್ಲಾಹನು ಅವನ ಕೆಲಸದಲ್ಲಿ ತೊಡಗುತ್ತಾನೆ. ಯಾರು ಒಬ್ಬ ಮುಸ್ಲಿಮನ ನೋವನ್ನು ದೂರ ಮಾಡುವನು ಅಲ್ಲಾಹನು ಪುರುತ್ಥಾನದ ದಿನ ಅವನ ನೋವು ದೂರ ಮಾಡುವನು, ಯಾರು ಒಬ್ಬ ಮುಸ್ಲಿಮನ ಪಾಪಗಳನ್ನು ಮುಚ್ಚುವನು, ಅಲ್ಲಾಹನು ಸಹ ಪುನರುತ್ತಾನದ ದಿನ ಅವನ ಪಾಪಗಳನ್ನು ಮುಚ್ಚುವನು.

**(2444)** ಹಝ್‌ರತ್ ಅನಸ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್ (ಸ) ನುಡಿದರು: ತನ್ನ ಸಹೋದರನಿಗೆ ಸಹಾಯ ನೀಡಿ, ಅವನು ಕ್ರೂರಿಯಾಗಿರಲಿ ಅಥವಾ ಹಿಂಸೆಗೆ ಒಳಗಾಗಲಿ, ಸಹಾಬರು ಹೇಳಿದರು: ಯಾ ರಸೂಲಲ್ಲಾಹ್(ಸ)! ನಾವು ತುಳಿತಕ್ಕೊಳಗಾದವರಿಗೆ ಸಹಾಯ ಮಾಡುತ್ತೇವೆ, ಆದರೆ ಅವನು ಕ್ರೂರಿಯಾಗಿದ್ದರೆ ನಾವು ಅವನಿಗೆ ಹೇಗೆ ಸಹಾಯ ಮಾಡಬಹುದು. ಅದಕ್ಕೆ ಹಝ್‌ರತ್ ಪೈಗಂಬರ್(ಸ) ಹೇಳಿದರು: ಅವನ ಕೈಗಳನ್ನು ದಬ್ಬಾಳಿಕೆ ಮಾಡುವುದರಿಂದ ತಡೆಯಿರಿ. **(ಸಹೀಹ್ ಬುಖಾರಿ, ಸಂಪುಟ–4, ಕಿತಾಬುಲ್ ಮಝಾಲಿಮ್, ಮುದ್ರಣ 2008 ಖಾದಿಯಾನ್)**

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅವರ ಅನುಗ್ರಹದಾಯಕ ಕಾಲಾವಧಿಯಲ್ಲಿ ಇಸ್ಲಾಮಿನ ಜೀವನಕ್ಕಾಗಿ ತಮ್ಮ ಸ್ವಖಿತ ಜೀವವನ್ನು ಮುಡುಪಾಗಿಡುತ್ತಿದ್ದರು.
ಮುಸ್ಲಿಮರು ತಮ್ಮ ಜೀವನವನ್ನು ಇಸ್ಲಾಮಿನ ಸೇವೆಗೆ ಮತ್ತು ದೇವರ ಮಾರ್ಗದಲ್ಲಿ ಏಕೆ ವಿನಿಯೋಗಿಸುವುದಿಲ್ಲ ಎಂದು ನಾನು ಆಶ್ಚರ್ಯ ಪಡುತ್ತೇನೆ
ಇದು ನಷ್ಟದ ವ್ಯಾಪಾರವಲ್ಲ, ಬದಲಿಗೆ ಇದು ಊಹಿಸಲಾಗದ ಲಾಭದ ವ್ಯಾಪಾರವಾಗಿದೆ, ಮುಸ್ಲಿಮರಿಗೆ ಈ ವ್ಯಾಪಾರದ ಲಾಭದ ಬಗ್ಗೆ ಅರಿವಿರುತ್ತಿದ್ದರೆ!

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ನಿಮ್ಮ ಜೀವನವನ್ನು ಮುಡಿಪಾಗಿಡಿ

ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಮನುಷ್ಯನು ತನ್ನ ಜೀವನವನ್ನು ಸಮರ್ಪಿಸುವುದು ಅವಶ್ಯಕವಾಗಿದೆ. ಇಂತಹ ಆರ್ಯರು ಆರ್ಯ ಸಮಾಜಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು ಮತ್ತು ಅಂತಹ ಪಾದರಿಯು ತಮ್ಮ ಜೀವನವನ್ನು ಮಿಷನ್‌ಗಾಗ್ಗಿ ಅರ್ಪಿಸಿದರು ಎಂದು ನಾನು ಕೆಲವು ಪತ್ರಿಕೆಗಳಲ್ಲಿ ಓದಿದ್ದೇನೆ. ಮುಸ್ಲಿಮರು ತಮ್ಮ ಜೀವನವನ್ನು ಇಸ್ಲಾಮಿನ ಸೇವೆಗೆ ಮತ್ತು ದೇವರ ಮಾರ್ಗದಲ್ಲಿ ಏಕೆ ವಿನಿಯೋಗಿಸುವುದಿಲ್ಲ ಎಂದು ನಾನು ಆಶ್ಚರ್ಯ ಪಡುತ್ತೇನೆ. ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಅನುಗ್ರಹದಾಯಕ ಕಾಲಾವಧಿಯನ್ನು ನೋಡಿ, ಅವರು ಇಸ್ಲಾಮ್‌ನ ಜೀವನಕ್ಕಾಗಿ ತಮ್ಮ ಜೀವನವನ್ನು ಹೇಗೆ ಮುಡಿಪಾಗಿಟ್ಟರು ಎಂದು ನಿಮಗೆ ತಿಳಿಯುತ್ತದೆ.

ಇದು ನಷ್ಟದ ವ್ಯಾಪಾರವಲ್ಲ, ಬದಲಿಗೆ ಇದು ಲಾಭದಾಯಕ ವ್ಯಾಪಾರವಾಗಿದೆ ಎಂದು ನೆನಪಿಡಿ. ತನ್ನ ಧರ್ಮಕ್ಕಾಗಿ ದೇವರಿಗೆ ತನ್ನ ಜೀವನವನ್ನೇ ಮುಡಿಪಾಗಿಡುವ ಈ ವ್ಯಾಪಾರದ ಲಾಭದ ಬಗ್ಗೆ ಮುಸಲ್ಮಾನರು ತಿಳಿದುಕೊಂಡರೆ, ಆತನು ತನ್ನ ಜೀವ ಕಳೆದುಕೊಳ್ಳುತ್ತಾರೆಯೇ? ಖಂಡಿತವಾಗಿಯೂ ಇಲ್ಲ. **ಫಲಹೂ ಅಜ್ರುಹೂ ಇಂದ ರಬ್ಬಿಹೀ ವಲಾ ಖೌಫುನ್ ಅಲೈಹಿಮ್ ವಲಾಹುಮ್ ಯಹ್‌ಝುನೂನ್** (ಅಲ್‌ಬಖರಾ: 113) ಅಂದರೆ ಹಾಗಲ್ಲ, ಯಾರು ಸಂಪೂರ್ಣವಾಗಿ ಅಲ್ಲಾಹನಿಗೆ ಶರಣಾಗಿ ಸತ್ಕರ್ಮಿಯಾಗಿರುತ್ತಾನೋ ಅವನಿಗೆ ತನ್ನ ಪ್ರಭುವಿನಿಂದ ಪ್ರತಿಫಲವಿದೆ. ಅಂತಹವರಿಗೆ ಭಯವಿಲ್ಲ, ಅವರು ದುಃಖಿತರೂ ಅಲ್ಲ. ಸರ್ವಶಕ್ತನಾದ ಅಲ್ಲಾಹನು ಈ ವಕ್ಫ್‌ನ ಪ್ರತಿಫಲ ನೀಡುತ್ತಾನೆ. ಈ ವಕ್ಫ್ ಎಲ್ಲಾ ರೀತಿಯ ಸುಃಖ ದುಃಖಗಳಿಂದ ಪರಿಹಾರ ಮತ್ತು ಬಿಡುಗಡೆ ನೀಡುತ್ತದೆ.

ಪ್ರತಿಯೊಬ್ಬ ಮನುಷ್ಯನೂ ಸ್ವಾಭಾವಿಕವಾಗಿ ಸೌಕರ್ಯ ಮತ್ತು ನೆಮ್ಮದಿಯನ್ನು ಬಯಸುತ್ತಿರುವಾಗ ಮತ್ತು ಎಲ್ಲಾ ಚಿಂತೆ ಮತ್ತು ದುಃಖಗಳಿಂದ ಪರಿಹಾರವನ್ನು ಬಯಸುತ್ತಿರುವಾಗ, ಈ ಕಾಯಿಲೆಗೆ ಪರಿಣಾಮಕಾರಿಯಾದ ಔಷಧಿಯನ್ನು ನೀಡಿದಾಗ ಅವನು ಅದರ ಬಗ್ಗೆ ಗಮನ ಹರಿಸದಿರಲು ಕಾರಣವೇನು ಎಂದು ನಾನು ಆಶ್ಚರ್ಯ ಪಡುತ್ತೇನೆ. ದೈವಿಕ ವಕ್ಫನ ಪಾಕವಿಧಾನ 1300 ವರ್ಷಗಳಿಂದ ಪರಿಣಾಮಕಾರಿ ಎಂದು ಸಾಬೀತಾಗಿದೆ ಅಲ್ಲವೇ? ಈ ಸಮರ್ಪಣೆಯಿಂದಾಗಿ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸಹಬರವು ಪರಿಶುದ್ಧ ಜೀವನದ ವಾರಸುದಾರರಾಗಿ ಶಾಶ್ವತ ಜೀವನಕ್ಕೆ ಅರ್ಹರಾಗಲಿಲ್ಲವೇ? ಈಗ, ಈ ಪಾಕವಿಧಾನದ ಪರಿಣಾಮಕಾರಿತ್ವದಿಂದ ಪ್ರಯೋಜನ ಪಡೆಯಲು ಹಿಂಜರಿಯಲು ಕಾರಣವೇನು?

ಇದರ ಅರ್ಥವೇನೆಂದರೆ, ಈ ವಕ್ಫ್‌ನ (ಶರಣಾಗತಿ, ಮುಡುಪಾಗಿಡುವುದು) ನಂತರ ಸಿಗುವ ಆನಂದದ ಬಗ್ಗೆ ಜನರಿಗೆ ಸರಳವಾಗಿ ತಿಳಿದಿಲ್ಲ, ಇಲ್ಲದಿದ್ದರೆ ಅವರು ಈ ರುಚಿ ಮತ್ತು ಸಂತೋಷದ ಸವಿ ಅವರಿಗೆ ಲಭಿಸಿದರೆ, ಅವರು ಕೊನೆಯಿಲ್ಲದ ಆಸೆಗಳೊಂದಿಗೆ ಈ ಕ್ಷೇತ್ರವನ್ನು ಪ್ರವೇಶಿಸುತ್ತಾರೆ.

**(ಮಲ್‌ಫೂಝಾತ್, ಸಂಪುಟ–1, ಪುಟ–500, ಪ್ರಕಟಿತ 2018 ಖಾದಿಯಾನ್)**

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಡೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

**(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))................(11)**

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಒಂಬತ್ತು ಸಂಚಿಕೆಗಳಿಂದ, ನಾವು ಅಹ್ಮದಿಯಾ ಜಮಾತ್‌ನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. 'ಮುನ್ಸಿಫ್'ನ ಆಕ್ಷೇಪಣೆಗಳಲ್ಲಿ ಒಂದು ಆಕ್ಷೇಪಣೆ ಹೀಗಿದೆ:

"ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸಿಯ್ಯತ್ (ಆವಿಷಕಾರಕ), ಮಹದಿವಿಯ್ಯತ್, ಮಸೀಹಿಯ್ಯತ್, ಝಿಲ್ಲಿ ನಬೀ, ಬರೂಝಿ ನಬೀ, ಹಖೀಖಿ ನಬೀ, ಝಿಲ್ ಮುಹಮ್ಮದ್(ಸ) ಮತ್ತು ಭಗವಂತ ಆಗಿರುವ ಬಗ್ಗೆ ವಾದವನ್ನು ಮಮಡಿದ್ದಾರೆ. ಅದೇನೇ ಇದ್ದರೂ, ಅದನ್ನು ಅನುಸರಿಸುವವರು ತಮ್ಮನ್ನು ಅಹ್ಮದಿ ಮುಸ್ಲಿಮರು ಎಂದು ಕರೆದುಕೊಳ್ಳಲು ಇಷ್ಟಪಡುತ್ತಾರೆ ಮತ್ತು ಇತರೆ ಮುಸ್ಲಿಮರು ಅವರನ್ನು ಹೀಗೆಯೇ ಯೋಚಿಸಬೇಕು ಎಂದು ಭಾವಿಸುತ್ತಾರೆ."

ಒಂದು ಆಕ್ಷೇಪವನ್ನು ಹೊರತುಪಡಿಸಿ ಹಿಂದಿನ ಸಂಚಿಕೆಗಳಲ್ಲಿ 'ಮುನ್ಸಿಫ್'ನ ಮೇಲಿನ ಎಲ್ಲಾ ಆಕ್ಷೇಪಣೆಗಳಿಗೆ ನಾವು ಉತ್ತರಿಸಿದ್ದೇವೆ. ಮತ್ತು ಆ ಒಂದು ಆಕ್ಷೇಪಣೆ ಏನೆಂದರೆ, ಸಯ್ಯಿದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಅವರು ತಾವು ಸ್ವತಃ ದೇವರಾಗಿದ್ದಾರೆ ಎಂದು ಹೇಳಿಕೊಂಡಿದ್ದಾರೆ ಎಂದಾಗಿದೆ. ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ತಮ್ಮ ಪುಸ್ತಕ ಆಯಿನಾ ಕಮಾಲಾತೆ ಇಸ್ಲಾಂನಲ್ಲಿ ತಮ್ಮ ಒಂದು ಕನಸನ್ನು ವಿವರಿಸಿದ್ದಾರೆ, ಅದರ ಆರಂಭಿಕ ಪದಗಳು ಹೀಗಿವೆ **ರಐತುನೀ ಫಿಲ್ ಮನಾಮಿ ಐನಲ್ಲಾಹಿ ವ ತಯಖ್ಖನ್‌ತು ಅನ್ನನೀ ಹುವ** ಅದರ ಅನುವಾದ ಹೀಗಿದೆ ನಾನು ಕನಸಿನಲ್ಲಿ ಕಂಡದ್ದೇನೆಂದರೆ ನಾನು ದೇವರು ಅಗಿದ್ದೇನೆ ಮತ್ತು ನಾನು ದೇವರೇ ಎಂದು ನಂಬಿದೆ. **ಮನಾಮ್** ಎಂಬ ಪದದ ಅರ್ಥ ಕನಸು ಸ್ಪಷ್ಟವಾಗಿದೆ. ಹಾಗಾದರೆ ಮುನ್ಸಿಫ್ ಸಂಪಾದಕರು ಏಕೆ ಸುಳ್ಳು ಸುದ್ದಿಯನ್ನು ಪ್ರಕಟಿಸಿದರು ಮತ್ತು ಸಾರ್ವಜನಿಕರನ್ನು ದಾರಿ ತಪ್ಪಿಸಿದರು. ಸುಳ್ಳುಗಳನ್ನು ಪ್ರಕಟಿಸುವುದು ಮತ್ತು ಜನರನ್ನು ದಾರಿ ತಪ್ಪಿಸುವುದು ಸಣ್ಣ ವಿಷಯವಲ್ಲ ಆದರೆ ಬಹಳ ದೊಡ್ಡ ಪಾಪವಾಗಿದೆ. ಸಂಪಾದಕರು ದೇವರಿಗೆ ಏಕೆ ಹೆದರುವುದಿಲ್ಲ? ದೇವರಿಗೆ ತನ್ನ ಮುಖವನ್ನು ತೋರಿಸಿ ಉತ್ತರಿಸಬೇಕಾಗಿದೆ ಎಂದು ಅವರು ನಂಬುವುದಿಲ್ಲವೇ? ಅಥವಾ ಅವರ ನಂಬಿಕೆಯು **ಇನ್ ಹಿಯ ಇಲ್ಲಾ ಹಯತುನಾ ಅದ್ದುನಿಯಾ ನಮುತು ವ ನಹ್‌ಯಾ ವಮಾ ನಹ್‌ನು ಬಿಮಬ್‌ಉಸೂನ್**– ಎಂದಾಗಿದೆಯೇ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಎಂದಿಗೂ ನಾನು ದೇವರಗಿದ್ದೇನೆ ಎಂದು ದಾವೆ ಮಾಡಲಿಲ್ಲ. ಮುನ್ಸಿಫ್‌ನ ಸಂಪಾದಕರು ಉಲ್ಲೇಖಗಳೊಂದಿಗೆ ಮಾತನಾಡಬೇಕು ಮತ್ತು ಅದನ್ನು ಯಾವಾಗ ಹೇಳಿದರು ಎಂದು ತೋರಿಸಬೇಕು, ಎಲ್ಲಿ ಹೇಳಿದರು, ಏನು ಹೇಳಿದರು, ಸ್ವಲ್ಪ ವಿವರವನ್ನು ನೀಡಬೇಕಾಗಿತ್ತು. ದುರದೃಷ್ಟವಶಾತ್, ಈ ಜನರು ಅನೈತಿಕತೆಯ ಎಲ್ಲಾ ಮಿತಿಗಳನ್ನು ದಾಟುತ್ತಾರೆ.

ಕನಸುಗಳಿಗೆ ವ್ಯಾಖ್ಯಾನದ ಅಗತ್ಯವಿರುತ್ತದೆ. ಯಾರಾದರೂ ಕನಸಿನಲ್ಲಿ ಅವನು ದೇವರಾಗಿದ್ದಾನೆ ಎಂದು ಕಂಡರೆ ಅವನು ದೇವರಾಗಿದ್ದಾನೆ ಎಂದು ಅರ್ಥವಲ್ಲ, ಹೌದು, ಆ ಕನಸನ್ನು ನೋಡಿದ ನಂತರ, ಹಝ್ರತ್ ಮಸೀಹ್ ಮೌಊದ್(ಅ) ರವರು ತಾನು ನಿಜವಾಗಿಯೂ ದೇವರಾಗಿದ್ದೇನೆ ಎಂದು ಹೇಳಿಕೊಂಡಿದ್ದರೆ, ಅದನ್ನು ಉಲ್ಲೇಖಗಳಿಂದ ನಮೂದಿಸಬೇಕು. ಮತ್ತು ಕನಸು ಕಾಣಲು ಆಕ್ಷೇಪಣೆ ಇದ್ದರೆ, ಅದು ಅಸಂಬದ್ಧವಾಗಿದೆ. ಹಝ್ರತ್ ಯೂಸುಫ್ (ಅ) ಅವರು ಒಂದು ಕನಸನ್ನು ಕಂಡರು: **ಇನ್ನಿ ರಐತು ಅಹದ ಅಶರ ಕೌಕಬಂ ವ್ವಶ್ಶಮ್‌ಸ ವಲ್ ಖಮರ ರಐತು ಲೀ ಸಾಜಿದೀನ್.** (ಸೂರಃ ಯೂಸುಫ್) ನಾನು ಹನ್ನೊಂದು ನಕ್ಷತ್ರಗಳು ಮತ್ತು ಸೂರ್ಯ ಮತ್ತು ಚಂದ್ರರು ನನಗೆ ಸಾಷ್ಟಾಂಗ ನಮಸ್ಕಾರ (ಸಜದ) ಮಾಡುವುದನ್ನು ನೋಡಿದೆ. ಮತ್ತೊಂದೆಡೆ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ಅಲಮ್ ತರಾ ಅನ್ನಲ್ಲಾಹ ಯಸ್ಜುದು ಲಹೂ ಮನ್ ಫಿಸ್ಸಮಾವಾತಿ ವಮನ್ ಫಿಲ್ ಅರ್ಝಿ ವಶ್ಶಮ್‌ಸು ವಲ್ ಖಮರು ವನ್ನಜ್ಮು ವಲ್ ಇಬಾಲು ವಶ್ಶಜರುದ್ದವಆಬ್ಬು ವ ಕಸೀರುಮ್ಮಿನ ನ್ನಾಸ್** ಅಂದರೆ: ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವರು, ಸೂರ್ಯ, ಚಂದ್ರ, ನಕ್ಷತ್ರಗಳು, ಪರ್ವತಗಳು ವೃಕ್ಷಗಳು, ಮೃಗಗಳು ಹಾಗೂ ಮನುಷ್ಯರಲ್ಲಿ ಹೆಚ್ಚಿನವರು ಅಲ್ಲಾಹನ ಆಜ್ಞಾನುಸರಣೆ ಮಾಡುವುದನ್ನು ನೀನು ಕಾಣುವುದಿಲ್ಲವೇ? ಆದರೆ ಅಲ್ಲಾಹನ ಶಿಕ್ಷೆಗೆ ಗುರಿಯಾಗುವವರೂ ಹಲವರಿದ್ದಾರೆ. ಅಲ್ಲಾಹನು ಯಾರನ್ನು ಅಪಮಾನಿಸುತ್ತಾನೋ ಅವನನ್ನು ಗೌರವಿಸುವವನು ಯಾರೂ ಇಲ್ಲ. ನಿಸ್ಸಂದೇಹವಾಗಿಯೂ ಅಲ್ಲಾಹನು ತಾನು ಇಚ್ಛಿಸುವುದನ್ನು ಮಾಡುತ್ತಾನೆ.

ಸಾಷ್ಟಾಂಗ ನಮಸ್ಕಾರವು (ಸಜದ) ಅಲ್ಲಾಹನ ಹಕ್ಕು ಎಂಬುದು ಈ ವಚನದಿಂದ ಸ್ಪಷ್ಟವಾಗುತ್ತದೆ. ಚಂದ್ರ, ಸೂರ್ಯ ಮತ್ತು ನಕ್ಷತ್ರಗಳು ತನಗೆ ಸಾಷ್ಟಾಂಗ ನಮಸ್ಕಾರ (ಸಜದ) ಮಾಡುತ್ತಿರುವುದನ್ನು ಕಂಡ ಹಝ್ರತ್ ಯೂಸುಫ್(ಅ.ಸ) ಹಾಗಾದರೆ ದೇವರಾಗಿದ್ದಾರೆಯೇ? ಇಲ್ಲ ಅಸಾಧ್ಯ. ಈ ಕನಸಿನ ಆಧಾರದ ಮೇಲೆ ಯೂಸುಫ್(ಅ) ದೈವತ್ವವನ್ನು ಪ್ರತಿಪಾದಿಸಲಿಲ್ಲ, ಬದಲಿಗೆ, ಅವರು(ಅ) ಈ ಕನಸಿನ ವ್ಯಾಖ್ಯಾನವನ್ನು ನೀಡಿದರು, ಅವರ ಪೋಷಕರು ಮತ್ತು ಹನ್ನೊಂದು ಸಹೋದರರು ಅವರ ಬಳಿಗೆ ಬಂದಾಗ ಮತ್ತು ಅವರ(ಅ) ಶ್ರೇಷ್ಠತೆ ಮತ್ತು ಉನ್ನತ ನೈತಿಕತೆ ಮತ್ತು ಚಾರಿತ್ರ್ಯದ ಬಗ್ಗೆ ಮನವರಿಕೆಯಾದ ಹಝ್ರತ್ ಯೂಸುಫ್(ಅ) ಹೇಳಿದರು: **ಯಾ ಅಬತಿ ಹಾಝು ತಅ್‌ವೀಲು ರುಯಾಯ ಮಿನ್ ಖಬ್ಲು, ಖದ್ ಜಅಲಹಾ ರಬ್ಬಿ ಹಖ್ಖಾ** ಓ ನನ್ನ ತಂದೆ, ನಾನು ಕಂಡ ಕನಸ್ಸಿನ ಅರ್ಥವು ಇದಾಗಿದೆ ಅದನ್ನು ಅಲ್ಲಾಹನು ನಿಜಗೊಳಿಸಿದನು. ಹೀಗಾಗಿ ಕನಸಿಗೆ ವ್ಯಾಖ್ಯಾನದ ಅಗತ್ಯವಿರುತ್ತದೆ.

ಹಝ್ರತ್ ಪೈಗಂಬರ್(ಸ) ಅವರು ಸ್ವತಃ ತಮ್ಮ ಕನಸಿನಲ್ಲಿ ಎರಡು ಚಿನ್ನದ ಬಳೆಗಳನ್ನು ಧರಿಸಿರುವುದನ್ನು ಕಂಡರು. ಇಸ್ಲಾಂನಲ್ಲಿ ಚಿನ್ನವನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಅವರು ತಮ್ಮ ಉಮ್ಮಾವನ್ನು ಚಿನ್ನವನ್ನು ಧರಿಸುವುದನ್ನು ನಿಷೇಧಿಸಿದರು, ಆದರೆ ಕನಸಿನಲ್ಲಿ ಅವರು ಚಿನ್ನವನ್ನು ಧರಿಸಿರುವುದನ್ನು ಕಂಡರು, 'ಮುನ್ಸಿಫ್' ಪತ್ರಿಕೆಯ ಸಂಪಾದಕರ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರು ನಿಷೇಧಿತ ಕಾರ್ಯವನ್ನು ಮಾಡಿದರು, ನೌಝುಬಿಲ್ಲಾಹ್.

ಇದು ಹದೀಸ್‌ನಲ್ಲಿದೆ: **ಫವ್ವಲ್‌ತುಹುಮಾ ಕಝ್ಝಾಬೀನಿ ಯಖ್ರುಜಾನಿ ಬಅ್‌ದಿ ಫಕಾನ ಅಹದುಹುಮಾ ಅಸ್ವದುಲ್ ಅನ್ಸಿಯ್ಯು ವಲ್ ಆಖರು ಮುಸೈಲಮತು** (ಬುಖಾರಿ ಕಿತಾಬುಲ್ ಮಗ಼ಾಝಿ, ಸಂಪುಟ–3, ಸಂಖ್ಯೆ–49, ಮಿಸರ್) ಹಝ್ರತ್ ಪೈಗಂಬರ್(ಸ) ಅವರು ಅದನ್ನು ಅರ್ಥೈಸಿದರು. ಅವರು ಹೇಳಿದರು: ಇದರ ವ್ಯಾಖ್ಯಾನ ನಾನು ಮಾಡಿದ್ದೇನೆಂದರೆ ನನ್ನ ನಂತರ ಇಬ್ಬರು ಸುಳ್ಳು ಪ್ರವದಿಗಳು ಹೊರಬರುವರು ಮತ್ತು ಅವರಲ್ಲಿ ಒಬ್ಬರು ಅಸ್ವದ್ ಅನ್ಸಿ ಹಾಗೂ ಮತ್ತುಬ್ಬನು ಮುಸೈಲಮ ಕಝ್ಝಾಬ್ ಆಗಿದ್ದಾನೆ.

ಆದ್ದರಿಂದ, ಕನಸಿಗೆ ವ್ಯಾಖ್ಯಾನದ ಅಗತ್ಯವಿರುತ್ತದೆ. ಇವು ಕೇವಲ ಒಂದೆರಡು ಉದಾಹರಣೆಗಳಾಗಿವೆ ಇಲ್ಲದಿದ್ದರೆ ಅಂತಹ ಹತ್ತಾರು ಉದಾಹರಣೆಗಳು ಇರಬಹುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಹಝ್ರತ್ ಪೈಗಂಬರ್(ಸ.ಅ) ರವರ ದೈವದರ್ಶನ ಹಾಗೂ ಕನಸ್ಸುಗಳಲ್ಲಿ ಕಂಡುಬರುವ ರೂಪಕಗಳು ಹದೀಸ್ ಓದುಗರಿಂದ ಮರೆಮಾಡಲ್ಪಟ್ಟಿಲ್ಲ. ಕೆಲವೊಮ್ಮೆ, ಹಝ್ರತ್ ಪೈಗಂಬರ್(ಸ.ಅ) ಅವರನ್ನು ದೈವದರ್ಶನದಲ್ಲಿ ಅವರ ಕೈಯಲ್ಲಿ ಎರಡು ಚಿನ್ನದ ಬಳೆಗಳನ್ನು ಧರಿಸಿದ್ದನ್ನು ಕಂಡಾಗ ಅದರಿಂದ ಇಬ್ಬರು ಸುಳ್ಳು ಪ್ರವಾದುತ್ವದ ವಾದ ಮಾಡಿದ ಸುಳ್ಳುಗಾರರು ಎಂದು ತೆಗೆದುಕೊಳ್ಳಲಾಯಿತು. ಮತ್ತು ಒಮ್ಮೆ ತಮ್ಮ ದೈವದರ್ಶನ ಹಾಗೂ ಕನಸ್ಸಿನಲ್ಲಿ ಪ್ರವಾದಿವರ್ಯರು ಗೋವುಗಳನ್ನು ವಧೆ ಮಾಡುವುದನ್ನು ನೋಡಿದರು ಮತ್ತು ಅವುಗಳಿಂದ ಅವರು ಉಹುದ್ ಯುದ್ಧದಲ್ಲಿ ಹುತಾತ್ಮರಾದ ಸಹಚರರನ್ನು ಅರ್ಥೈಸಿದರು. ಮತ್ತೊಮ್ಮೆ ಹಝ್ರತ್ ಪೈಗಂಬರ್(ಸ) ಅವರು ತಮ್ಮ ಒಂದು ಕನಸ್ಸಿನಲ್ಲಿ ಅಬುಜಹಲ್‌ಗಾಗಿ ನಿಮಗೆ ದ್ರಾಕ್ಷಿಯನ್ನು ನೀಡಲಾಗಿದ್ದನ್ನು ಕಂಡರು ಆದರೆ ಅಂತಿಮವಾಗಿ ಅದು ಇಕ್ರಿಮಾ ಎಂದು ಬದಲಾಯಿತು ಮತ್ತು ಒಮ್ಮೆ ಹಝ್ರತ್ ಪೈಗಂಬರ್(ಸ) ಅವರು ಒಂದು ಭೂಮಿಗೆ ಹೋದಂತೆ ನೋಡಿದರು. ನಿಮ್ಮ ಅಭಿಪ್ರಾಯದಲ್ಲಿ ಅದು ಯೆಮೆನ್ ಆಗಿತ್ತು ಆದರೆ ವಾಸ್ತವವಾಗಿ ಆ ಭೂಮಿಯ ಹೆಸರು ಮದೀನ ಮುನವ್ವರ ಆಗಿತ್ತು."

(ಇಝಾಲ ಔಹಾಮ್, ರೂಹಾನಿ ಖಝಾಈನ್,ಸಂಪುಟ–3,

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

# ಖುತ್ಬ ಜುಮುಅ

ಹಝ್ರತ್ ಪೈಗಂಬರ್(ಸ) ಅವರ ಎಚ್ಚರಿಕೆಯ ಮನಸ್ಸು ಮುಸ್ಲಿಮರನ್ನು ಎಲ್ಲಾ ಸಮಯದಲ್ಲೂ ಎಚ್ಚರವಾಗಿ ಮತ್ತು ಎಚ್ಚರವಾಗಿರಿಸದಿದ್ದರೆ ಮತ್ತು ಹಝ್ರತ್ ಪೈಗಂಬರ್(ಸ) ಅವರು ಶತ್ರುಗಳ ಒಕ್ಕೂಟಗಳು ದಾಳಿ ಮಾಡುವ ಮೊದಲು ಅವರನ್ನು ಚದುರಿಸಲು ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಆ ದಿನಗಳಲ್ಲಿ ಮುಸ್ಲಿಮರ ಸರ್ವನಾಶವಾಗುವುದರಲ್ಲಿ ಯಾವುದೇ ಸಂದೇಹವಿರಲಿಲ್ಲ.

ಹಝ್ರತ್ ಪೈಗಂಬರ್(ಸ) ಅವರು ಜನ್ನತುಲ್ ಬಖೀಯನ್ನು ಮುಸ್ಲಿಮರ ಖಬರ್‌ಸ್ತಾನಕ್ಕಾಗಿ ಆಯ್ಕೆ ಮಾಡಿದರು, ಅಂದಿನಿಂದ ಇದು ವಿಶಿಷ್ಟ ಸ್ಥಾನಮಾನವನ್ನು ಅನುಭವಿಸಿದೆ.

ಅಲ್ಲಿ ಸಮಾಧಿ ಮಾಡಿದ ಮೊದಲ ವ್ಯಕ್ತಿ ಹಝ್ರತ್ ಉಸ್ಮಾನ್ ಬಿನ್ ಮಝ್ಊನ್(ರ) ಆಗಿದ್ದಾರೆ.

ಉಸ್ಮಾನ್ ಬಿನ್ ಮಝ್ಊನ್(ರ)ರ ನಿಧನ ಹಝ್ರತ್ ಪೈಗಂಬರ್(ಸ)ರನ್ನು ಬಹಳ ದುಃಖಿಸಿತು. ಅವರು ನಿಧನಗೊಂಡ ನಂತರ ಹಝ್ರತ್ ಪೈಗಂಬರ್(ಸ) ಅವರ ಹಣೆಯನ್ನು ಚುಂಬಿಸಿದರು ಎಂದೂ ಆ ವೇಳೆ ಹಝ್ರತ್ ಪೈಗಂಬರ್(ಸ)ರ ಕಣ್ಣುಗಳು ತೇವಗೊಂಡುವು ಎಂದೂ ವರದಿಯಲ್ಲಿ ಬಂದಿದೆ.

**ಹಝ್ರತ್ ಪೈಗಂಬರ್(ಸ)ರ ಪುತ್ರಿ ಹಝ್ರತ್ ರುಖಿಯಾ(ರ)ರವರ ನಿಧನ ಹಾಗೂ ಹಝ್ರತ್ ಉಸ್ಮಾನ್ ಗ಼ನಿ(ರ) ಅವರಿಂದ ಹಝ್ರತ್ ಉಮ್ಮೆ ಕುಲ್ಸೂಮ್(ರ) ರವರ ವಿವಾಹ ಮತ್ತು ಅವರ ನಿಧನದ ಪ್ರಸ್ತಾವನೆ**

ಒಂದು ವರದಿಯಲ್ಲಿ ಹಝ್ರತ್ ಉಮ್ಮು ಕುಲ್ಸುಮ್(ರ) ನಿಧನಗೊಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಮೂರನೇ ಪುತ್ರಿ ಇರುತ್ತಿದ್ದರೆ, ಅವಳ ವಿವಾಹವನ್ನು ಕೂಡ ಉಸ್ಮಾನ್(ರ)ರೊಂದಿಗೆ ಮಾಡಿಸುತ್ತಿದ್ದೆ.

**ಬನೀ ಗ಼ತ್‌ಫಾನ್ ಯುದ್ಧ, ಬುಹ್ರಾನ್ ಯುದ್ಧ ಮತ್ತು ಸರಿಯ್ಯ ಬನೂ ಹಾರಿಸಾ ಸೇರಿಸಿದಂತೆ ಇಸ್ಲಾಮ್ ಇತಿಹಾಸದಿಂದ ಎರಡು ಮತ್ತು ಮೂರು ಹಿಜರಿಯಲ್ಲಿ ನಡೆದ ಕೆಲವು ಘಟನೆಗಳ ಪ್ರಸ್ತಾವನೆ**

ಪೆಲಸ್ತೀನಿಯರನ್ನು ಯಾವಾಗಲೂ ದುಆವಿನಲ್ಲಿ ನೆನಪಿಡಿರಿ. ಅವರನ್ನು ಮರೆಯಬೇಡಿರಿ. ಪೀಡನೆಯಿಂದ ತತ್ತರಿಸುತ್ತಿರುವ ಮಹಿಳೆಯರು ಮತ್ತು ಮಕ್ಕಳನ್ನು ಅಲ್ಲಾಹನು ರಕ್ಷಿಸಲಿ.

ಹೆಚ್ಚಿನ ದೊಡ್ಡ ಸರ್ಕಾರಗಳು ಮತ್ತು ರಾಜಕರಣಿಗಳು ಕೂಡ ಪೆಲಸ್ತೀನಿಯರ ಜೀವಕ್ಕೆ ಯಾವುದೇ ಬೆಲೆ ನೀಡುತ್ತಿಲ್ಲ. ಅವರಿಗೆ ಅವರದೇ ಸ್ವಾರ್ಥ ಲಾಭಗಳು ಇವೆ. ಅಲ್ಲಾಹನು ಒಂದು ಕಾಲಾವಧಿ ತನಕವೇ ಕಾಲಾವಕಾಶ ನೀಡುತ್ತಾನೆ. ಅಲ್ಲದೇ ಇಹಲೋಕ ಮಾತ್ರವಲ್ಲ, ಪರಲೋಕವೂ ಇದೆ. ಈ ಲೋಕದಲ್ಲೂ ಹಿಡಿಗೂಡಲ್ಪಡಬಹುದು. ಪರಲೋಕದಲ್ಲಿ ಅವರು ಖಂಡಿತ ಹಿಡಿಗೂಡಲ್ಪಡುವರು.

ಹೇಗಿದ್ದರೂ ನಾವು ಪೀಡಿತ ಪೆಲಸ್ತೀನಿಯರಿಗಾಗಿ ದುಆ ಮಾಡಬೇಕು. ಅಲ್ಲಾಹನು ಅವರನ್ನು ಈ ದೌರ್ಜನ್ಯಗಳಿಂದ ಮುಕ್ತಿ ನೀಡಲಿ.

ಸನ್ಮಾನ್ಯ ಹಮೀದುರ್ರಹ್ಮಾನ್ ಖ಼ಾನ್ ಸಾಹಿಬ್‌ರ ಪತ್ನಿಯಾದ ಮನ್ಸೂರ ಬಾಸಿಮ ಸಾಹಿಬ ಮತ್ತು ಫೈಸಲಾಬಾದ್‌ನ ಕೃಷಿ ವಿಶ್ವವಿದ್ಯಾಲಯದಲ್ಲಿ ಮಾಜಿ ಉಪ ರಿಜಿಸ್ಟ್ರಾರ್ ಆಗಿದ್ದ ಚೌಧರಿ ರಶೀದ್ ಅಹ್ಮದ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗು ನಮಾಝೆ ಜನಾಝ ಗ಼ಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **10–11–2023** ರಂದು ನೀಡಿದ **ಖುತ್ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔
اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಬದ್ರ್ ಯುದ್ಧದ ತಕ್ಷಣದ ನಂತರ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೆ. ಈ ಸಂಬಂಧವಾಗಿ ಹಿಜರೀ 2ರ ಘಟನೆಗಳಲ್ಲಿ ಒಂದು ಜನ್ನತುಲ್ ಬಖೀಯ ಸ್ಥಾಪನೆಯ ಪ್ರಸ್ತಾಪವಾಗಿದೆ. ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಆಗಮಿಸಿದ ನಂತರ, ಅಲ್ಲಿ ಅನೇಕ ಖಬರ್‌ಸ್ತಾನಗಳು ಇದ್ದವು. ಯಹೂದಿಗಳು ತಮ್ಮದೇ ಆದ ಖಬರ್‌ಸ್ತಾನಗಳನ್ನು ಹೊಂದಿದ್ದರು ಮತ್ತು ಅರಬ್ಬರು ತಮ್ಮದೇ ಆದ ಖಬರ್‌ಸ್ತಾನಗಳನ್ನು ಹೊಂದಿದ್ದರು. ಆ ಸಮಯದಲ್ಲಿ ಮದೀನಾ ತಯ್ಯಿಬವು ವಿವಿಧ ಪ್ರದೇಶಗಳಾಗಿ ವಿಭಜಿಸಲ್ಪಟ್ಟಿದ್ದರಿಂದ, ಪ್ರತಿ ಗೋತ್ರದ ಜನಾಂಗದವರು ತಮ್ಮ ತಮ್ಮ ಪ್ರದೇಶದಲ್ಲಿನ ತೆರೆದ ಜಾಗದಲ್ಲಿ ತಮ್ಮ ಮೃತರನ್ನು ಹೂಳುತ್ತಿದ್ದರು. ಖುಬಾದ ಪ್ರತ್ಯೇಕ ಖಬರ್‌ಸ್ತಾನವಿತ್ತು, ಅದು ಹೆಚ್ಚು ಪ್ರಸಿದ್ಧವಾಗಿತ್ತು, ಆದರೂ ಅನೇಕ ಇತರ ಖಬರ್‌ಸ್ತಾನಗಳು ಸಹ ಇದ್ದವು. ಬನೂಜಾಫರ್ ಗೋತ್ರದವರು ತಮ್ಮದೇ ಆದ ಖಬರ್‌ಸ್ತಾನವನ್ನು ಹೊಂದಿದ್ದರು. ಬನೂ ಸಲ್ಮಾರವರು ತಮ್ಮದೇ ಆದ ಖಬರ್‌ಸ್ತಾನವನ್ನು ಹೊಂದಿದ್ದರು. ಇತರ ಖಬರ್‌ಸ್ತಾನಗಳಲ್ಲಿ ಬನೂ ಸಾಇದಾರವರ ಖಬರ್‌ಸ್ತಾನವಿತ್ತು, ನಂತರ ಅದನ್ನು ಸೌಖುನ್ನಬೀ(ಸ) ಗೆ ಬದಲಾಯಿಸಲಾಯಿತು. ಅದರ ಜಾಗದಲ್ಲಿ ಈಗ ಮಸ್ಜಿದೆ ನಬವಿ ನಿರ್ಮಿಸಲಾಗಿದೆ, ತಾಳೆ ಮರಗಳ ಗುಂಪಿನಲ್ಲಿ ಕೆಲವು ಅವಿಶ್ವಾಸಿಗಳ ಸಮಾಧಿಗಳಿದ್ದವು. ಈ ಎಲ್ಲಾ ಖಬರ್‌ಸ್ತಾನಗಳಲ್ಲಿ ಬಖೀಉಲ್ ಗ಼ರ್ಖದ್ ಅತ್ಯಂತ ಪ್ರಾಚೀನ ಮತ್ತು ಅತ್ಯಂತ ಪ್ರಸಿದ್ಧವಾದದ್ದು, ಮತ್ತು ಹಝ್ರತ್ ಪೈಗಂಬರ್(ಸ) ಅವರು ಅದನ್ನು ಮುಸ್ಲಿಮರ ಖಬರ್‌ಸ್ತಾನಕ್ಕಾಗಿ ಆಯ್ಕೆ ಮಾಡಿದರು, ಅಂದಿನಿಂದ ಇದು ವಿಶಿಷ್ಟ ಸ್ಥಾನಮಾನವನ್ನು ಅನುಭವಿಸಿದೆ.

ಹಝ್ರತ್ ಉಬೈದುಲ್ಲಾ ಬಿನ್ ಅಬೀ ರಾಫಿ(ರ) ವರದಿ ಮಡುತ್ತಾರೆ ರಸೂಲುಲ್ಲಾಹ್(ಸ) ಅವರು ಮುಸ್ಲಿಮರ ಖಬರ್‌ಗಳಿಗಗಿ ಪ್ರತ್ಯೇಕ ಜಾಗವನ್ನು ಹುಡುಕುತ್ತಿದ್ದರು ಮತ್ತು ಈ ಉದ್ದೇಶಕ್ಕಾಗಿ ಹಝ್ರತ್ ಪೈಗಂಬರ್(ಸ) ವಿವಿಧ ಸ್ಥಳಗಳಿಗೆ ಭೇಟಿ ನೀಡಿದರು. ಬೇರೆ ಬೇರೆ ಸ್ಥಳಗಳಿಗೆ ಹೋಗಿ ನೋಡಿದರು. ಈ ವಿಶಿಷ್ಠ ಮಹಿಮೆಯು ಬಖೀಉಲ್ ಗ಼ರ್ಖದ್‌ನ ಭಾಗದಲ್ಲಿ ಬರೆಯಲಾಗಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ಸ್ಥಳವನ್ನು ಆಯ್ಕೆ ಮಾಡಲು ನನಗೆ ಆದೇಶಿಸಲಾಗಿದೆ, ಅಂದರೆ ಬಖೀ ಅಲ್-ಗ಼ರ್ಖದ್. ಅದನ್ನು ಆ ಕಲದಲ್ಲಿ ಬಖೀ ಅಲ್-ಖನ್‌ಜಬ ಎಂದೂ ಕರೆಯಲಾಗುತ್ತಿತ್ತು. ಅದರಲ್ಲಿ ಹಲವಾರು ಮರಗಳು ಮತ್ತು ಪೊದೆಗಳು ಇದ್ದವು. ಈ ಸ್ಥಳದಲ್ಲಿ ಸೊಳ್ಳೆಗಳು ಹಾಗೂ ಇತರೆ ಕೀಟಗಳು ಹೆಚ್ಚಾಗಿದ್ದು, ಕೊಳೆಯಿಂದಾಗಿ ಅಥವಾ ಕಾಡಿನ ಕಾರಣದಿಂದ ಸೊಳ್ಳೆಗಳು ಹಾರಿಹೋದಾಗ

ಹೊಗೆಯ ಮೋಡದಂತೆ ಭಾಸವಾಗುತ್ತಿತ್ತು. ಅಲ್ಲಿ ಸಮಾಧಿ ಮಾಡಿದ ಮೊದಲ ವ್ಯಕ್ತಿ ಹಝ್ರತ್ ಉಸ್ಮಾನ್ ಬಿನ್ ಮಝ್ಊನ್(ರ) ಆಗಿದ್ದಾರೆ.

ಹಝ್ರತ್ ಪೈಗಂಬರ್(ಸ) ರವರು ಅವರ ಸಮಾಧಿಯ ತಲೆಯ ಮೇಲೆ ಒಂದು ಕಲ್ಲು ಇರಿಸಿ, ಇವರು ನಮ್ಮ (ಪೇಶ್‌ರೌ) ಪೂರ್ವಜರಾಗಿದ್ದಾರೆ ಎಂದು ಹೇಳಿದರು. ಅವರ ನಂತರ, ಯಾರಾದರೂ ಮರಣ ಹೊಂದಿದಾಗ, ಜನರು ಹಝ್ರತ್ ಪೈಗಂಬರ್(ಸ) ಅವರನ್ನು ಇವರಿಗೆ ಎಲ್ಲಿ ಸಮಾಧಿ ಮಾಡಬೇಕು? ಎಂದು ಕೇಳುತ್ತಿದ್ದರು. ಅದಕ್ಕೆ ರಸೂಲುಲ್ಲಾಹ್(ಸ) ಹೇಳುತ್ತಿದ್ದರು, ನಮ್ಮ ಪೂರ್ವವರ್ತಿ ಉಸ್ಮಾನ್ ಬಿನ್ ಮಝೂನ್ ಬಳಿ ಬಖಿಯಲ್ಲಿ ಅವರನ್ನು ಸಮಾಧಿ ಮಾಡಿ. ಹೇರಳವಾಗಿ ಮರಗಳು ಇರುವ ಪ್ರದೇಶವನ್ನು ಅರಬಿ ಭಾಷೆಯಲ್ಲಿ ಬಖೀ ಎಂದು ಹೇಳಲಾಗುತ್ತದೆ. ಈ ಖಬರ್‌ಸ್ತಾನವನ್ನು ಜನ್ನತುಲ್‌ಬಖೀ ಎಂದೂ ಕರೆಯಲಾಗುತ್ತದೆ. ಇದಲ್ಲದೆ, ಇತರ ಸ್ಥಳೀಯ ಮರುಭೂಮಿ ಪೊದೆಗಳು ಸಹ ಹೇರಳವಾಗಿದ್ದವು. ಇದನ್ನು ಜನ್ನತುಲ್ ಬಖೀ ಎಂದೂ ಕರೆಯುತ್ತಾರೆ. ಅರೇಬಿಕ್ ಭಾಷೆಯಲ್ಲಿ ಜನ್ನತ್ ಎಂಬ ಪದಕ್ಕೆ ಉದ್ಯಾನ ಅಥವಾ ಫಿರ್ದೌಸ್ ಎಂಬ ಅರ್ಥವೂ ಇದೆ. ಆದ್ದರಿಂದ, ಹೆಚ್ಚಿನ ಅಲ್‌ಜಮೀ ಪ್ರವಾಸಿಗರಲ್ಲಿ ಈ ಸ್ಥಳವನ್ನು ಜನ್ನತುಲ್ ಬಖೀ ಎಂದು ಕರೆಯಲಾಗುತ್ತದೆ.

ಅಬ್ದುಲ್ ಹಮೀದ್ ಖಾದ್ರಿ ಸಾಃಇಬ್ ಅವರು ಈ ವಿವರಣೆಯನ್ನು ಬರೆದಿದ್ದಾರೆ. ಅವರು ಹೇಳುತ್ತಾರೆ ಅರಬ್ಬರು ಸಾಮಾನ್ಯವಾಗಿ ತಮ್ಮ ಖಬರ್‌ಗಳನ್ನು ಮತ್ತು ಸ್ಮಶಾನಗಳನ್ನು ಜನ್ನತ್ ಎಂದು ಕರೆಯುವುದನ್ನು ನಾವು ಮರೆಯಬಾರದು. ಇದು ಅರಬ್ಬರಲ್ಲಿ ಹೆಚ್ಚು ಜನಪ್ರಿಯವಾಗಿರುವ ಮಖಾಬ್ಬಿರುಲ್ ಬಖೀ ಎಂಬ ಹೆಸರನ್ನು ಸಹ ಹೊಂದಿದೆ.

(ಜುಸ್ತಜೂ ಎ ಮದೀನ, ಅಬ್ದುಲ್ ಹಮೀದ್ ಖಾದ್ರಿ, ಓರಿಯೆಂಟಲ್ ಪಬ್ಲಿಕೇಷನ್ಸ್ ಲಾಹೋರ್ ಪಾಕಿಸ್ತಾನ 2007 ಪ್ರಕಟಿಸಿದೆ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಿಜರೀ 2ರಲ್ಲಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರಿಗಾಗಿ ಒಂದು ಖಬರಸ್ತಾನವನ್ನು ಆಯ್ಕೆ ಮಾಡಿದರು. ಅದನ್ನು ಜನ್ನತುಲ್ ಬಖೀ ಎಂದು ಹೇಳಲಾಗುತ್ತದೆ. ಈ ಖಬರ್‌ಸ್ತಾನದಲ್ಲಿ ಮೊತ್ತಮೊದಲಾಗಿ ಉಸ್ಮಾನ್ ಬಿನ್ ಮಝ್ಊನ್(ರ) ದಫನ್ ಮಾಡಲ್ಪಟ್ಟಿದ್ದರು. ಅವರು ಅತ್ಯಂತ ಸಾತ್ವಿಕ, ಆರಾಧಕ ಮತ್ತು ಸಂತರಾದ ವ್ಯಕ್ತಿಯಾಗಿದ್ದರು. ಮುಸ್ಲಿಮರಾದ ನಂತರ ಲೋಕದಿಂದ ವಿರಕ್ತರಾಗಿಕೊಂಡು ಪತ್ನಿ ಮಕ್ಕಳಿಂದ ಬೇರ್ಪಟ್ಟು ತಮ್ಮ ಜೀವಿತವನ್ನು ದೇವಾರಾಧನೆಗಾಗಿ ಮಾತ್ರ ಮುಡಿಪಾಗಿಡಲು ಒಂದು ಬಾರಿ ಹಝ್ರತ್ ಪೈಗಂಬರ್(ಸ)ರೊಡನೆ ಅವರು ಅನುಮತಿ ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ದೇವನಿಗೆ ಸಲ್ಲಬೇಕಾದ ಹಕ್ಕನ್ನು ನೀವು ದೇವನಿಗೆ ಸಲ್ಲಿಸಿರಿ; ಪತ್ನಿ–ಮಕ್ಕಳಿಗೆ ಕೊಡಬೇಕಾದ ಹಕ್ಕನ್ನು ಪತ್ನಿ–ಮಕ್ಕಳಿಗೆ ಕೊಡಿರಿ; ಅತಿಥಿಗಳಿಗೆ ಕೊಡಬೇಕಾದ ಹಕ್ಕನ್ನು ಅತಿಥಿಗಳಿಗೆ ಕೊಡಿರಿ ಮತ್ತು ಸ್ವಂತಕ್ಕೆ ನೀಡಬೇಕಾದ ಹಕ್ಕನ್ನು ಸ್ವಂತಕ್ಕೆ ನೀಡಿರಿ. ಏಕೆಂದರೆ ಈ ಎಲ್ಲ ಹಕ್ಕುಗಳನ್ನು ಅಲ್ಲಾಹನು ನಿಶ್ಚಯಿಸಿದ್ದಾನೆ. ಅವುಗಳನ್ನು ಈಡೇರಿಸುವುದು ಆರಾಧನೆಯಲ್ಲಿ ಒಳಪಡುವುದು. ಒಟ್ಟಿನಲ್ಲಿ, ಲೋಕದಿಂದ ವಿರಕ್ತನಾಗಲು ಹಝ್ರತ್ ಪೈಗಂಬರ್(ಸ) ಉಸ್ಮಾನ್ ಬಿನ್ ಮಝ್ಊನ್(ರ)ರಿಗೆ ಅನುಮತಿ ನೀಡಲಿಲ್ಲ. ಇಸ್ಲಾಮಿನಲ್ಲಿ ಸನ್ಯಾಸವನ್ನು ನಿಷಿದ್ಧಗೊಳಿಸಿಕೊಂಡು ಹಝ್ರತ್ ಪೈಗಂಬರ್(ಸ) ತನ್ನ ಸಮುದಾಯದಲ್ಲಿ ಎರಡು ಎಲ್ಲೆಗಳ ನಡುವೆ ಮಧ್ಯಮ ಮಾರ್ಗವನ್ನು ಸ್ಥಾಪಿಸಿದರು. ಉಸ್ಮಾನ್ ಬಿನ್ ಮಝ್ಊನ್(ರ)ರ ನಿಧನ ಹಝ್ರತ್ ಪೈಗಂಬರ್(ಸ)ರನ್ನು ಬಹಳ ದುಃಖಿಸಿತು. ಅವರು ನಿಧನಗೊಂಡ ನಂತರ ಹಝ್ರತ್ ಪೈಗಂಬರ್(ಸ) ಅವರ ಹಣೆಯನ್ನು ಚುಂಬಿಸಿದರು ಎಂದೂ ಆ ವೇಳೆ ಹಝ್ರತ್ ಪೈಗಂಬರ್(ಸ)ರ ಕಣ್ಣುಗಳು ತೇವಗೊಂಡುವು ಎಂದೂ ವರದಿಯಲ್ಲಿ ಬಂದಿದೆ. ಅವರನ್ನು ದಫನ್ ಮಾಡಿದ ನಂತರ, ಅವರು(ಸ) ಅವರ ಖಬರ್‌ನ ತಲೆಯ ಮೇಲೆ ಸಂಕೇತವಾಗಿ ಒಂದು ಕಲ್ಲನ್ನು ಸ್ಥಾಪಿಸಿದರು ಮತ್ತು ನಂತರ ಹಝ್ರತ್ ಪೈಗಂಬರ್(ಸ) ಅವರು ಜನ್ನತುಲ್ ಬಖೀಗೆ ಹೋದಾಗ ಅವರಿಗಾಗಿಯೂ ದುಆ ಮಾಡುತ್ತಿದ್ದರು. ಮದೀನಾದಲ್ಲಿ ಮರಣ ಹೊಂದಿದ ಮೊದಲ ಮುಹಾಜಿರ್ ಉಸ್ಮಾನ್ ಆಗಿದ್ರು.

(ಸೀರತ್ ಖಾತಮನ್ನಬೀಈನ್, ಪುಟ–462–463)

ಈಗ ನಾನು ಬನೀ ಗ಼ತ್‌ಫಾನಿನ ಪ್ರಸ್ತಾಪ ಮಾಡುತ್ತೇನೆ. ಗ಼ತ್‌ಫಾನಿನ ಶಾಖೆಯಾದ ಬನೀ ಸಅ್‌ಲಬ ಮತ್ತು ಬನೂ ಮುಹಾರಿಬ್ ಮುಸ್ಲಿಮರ ವಿರುದ್ಧ ಒಂದು ಜಾಗದಲ್ಲಿ ಒಟ್ಟುಗೂಡುತ್ತಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಇದು ಗ಼ತ್‌ಫಾನಿನ ಒಂದು ಪ್ರದೇಶವಾಗಿದೆ. ಮದೀನಾದ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ದಾಳಿ ಮಾಡುವುದು ಅವರ ಉದ್ದೇಶವಾಗಿದೆ. ಅವರನ್ನು ಸಂಘಟಿಸಿ ಮುಸ್ಲಿಮರ ವಿರುದ್ಧ ಪ್ರಚೋದಿಸಿದವರಲ್ಲಿ ಬನೂ ಮಿಹ್ರಾಬ್‌ನ ಒಬ್ಬ ವ್ಯಕ್ತಿ ದುಸೂರ್ ಬಿನ್ ಹಾರಿಸ್ ಆಗಿದ್ದನು. ಈ ಮಾಹಿತಿ ಲಭಿಸಿದ ನಂತರ ಹಝ್ರತ್ ಪಯಗಂಬರ್(ಸ) ಅವರು ಜನರನ್ನು ಸಿದ್ಧರಾಗಲು ಆದೇಶಿಸಿದರು ಮತ್ತು ನಾಲ್ಕುನೂರು ಐವತ್ತು ಸಹಾಬರವರ ಸೈನ್ಯದೊಂದಿಗೆ ಮದೀನಾದಿಂದ ಹೊರಟಿದರು. ಅವರು ಕೆಲವೇ ಕೆಲವು ಕುದುರೆಗಳನ್ನು ಹೊಂದಿದ್ದರು ಮತ್ತು ಮದೀನಾದಲ್ಲಿ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅವರನ್ನು ತಮ್ಮ ಉಪನಾಯಕರಾಗಿ ನೇಮಿಸಿದರು. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–290, ದಾರುಲ್ ಕುತುಬ್ ಇಲ್‌ಮಿಯ) (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ–4, ಪುಟ–176, ದಾರುಲ್ ಕುತುಬ್ ಇಲ್‌ಮಿಯ)

3 ಹಿಜರಿ ರಬೀಉಲ್ ಅವ್ವಲ್ ತಿಂಗಳಲ್ಲಿ ಈ ಯುದ್ಧ ನಡೆಯಿತು. 12 ರಬೀಉಲ್ ಅವ್ವಲ್‌ನಲ್ಲಿ ಹಝ್ರತ್ ಪೈಗಂಬರ್(ಸ)ರು ಈ ಅಭಿಯಾನಕ್ಕಾಗಿ ಹೊರಟರು. ಮದೀನದ ಜನರು ಹನ್ನೊಂದು ದಿನಗಳ ಕಾಲ ಅವರ ಅಗಲಿಕೆಯನ್ನು ಸಹಿಸಬೇಕಾಯಿತು, ನಂತರ ಅವರು ರಬೀಉಲ್ ಅವ್ವಲ್ 24 ರಂದು ಮದೀನಾಗೆ ಮರಳಿದರು. ಹಝ್ರತ್ ಪೈಗಂಬರ್(ಸ) ರವರು ಗ಼ತ್‌ಫಾನ್ ಅನ್ನು ನಿಗ್ರಹಿಸಲು ಗ಼ತ್‌ಫಾನ್‌ನ ಬಳಿ ತಂಗಿದ್ದ ಸ್ಥಳದ ಹೆಸರು ಧಿ ಅಮ್ರ್ ಎಂದಾಗಿತ್ತು. ಈ ಕಾರಣಕ್ಕಾಗಿ, ಈ ಅಭಿಯಾನವನ್ನು ಗ಼ಝ್ವ ಧಿ ಅಮ್ರ್ ಮತ್ತು ಗ಼ತ್‌ಫಾನ್ ಗೋತ್ರದಕಾರಣದಿಂದ ಗ಼ಝ್ವ ಬನೂ ಗ಼ತ್‌ಫಾನ್ ಎಂದು ಕೆಯಲಾಗುತ್ತದೆ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–290, ದರುಲ್ ಕುತುಬ್ ಇಲ್‌ಮಿಯು) (ದಾಯೆರಃ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–6, ಪುಟ–367–368, ದಾರುಲ್ ಮುಆರಿಫ್, ಲಾಹೋರ್)

ಮುಶ್ರಿಕರ ಒಕ್ಕೂಟದ ವಿರುದ್ಧ ಹಝ್ರತ್ ಪೈಗಂಬರ್(ಸ) ಅವರ ಹೊರಡವಿಕೆಯ ವಿವರಣೆ ಹೀಗಿದೆ: ಮದೀನಾದಿಂದ ಹೊರಟ ನಂತರ ಸಹಾಬರವರು ಧುಲ್ ಖಿಸ್ಸ ಎಂಬ ಸ್ಥಳದಲ್ಲಿ ಬನೂ ಸಅ್‌ಲಬಾದ ಓರ್ವ ವ್ಯಕ್ತಿಯನ್ನು ಭೇಟಿಯಾದರು. ಧುಲ್ ಖಿಸ್ಸ ರಬಝುದ ಮಾರ್ಗದಲ್ಲಿ ಮದೀನದಿಂದ 24 ಮೈಲಿ ದೂರದಲ್ಲಿದೆ. ಈ ವ್ಯಕ್ತಿಯ ಹೆಸರು ಜಬ್ಬಾರ್ ಎಂದಾಗಿತ್ತು. ಸಹಾಬರವರು ಆತನನ್ನು ಬಂಧಿಸಿ ಆತನು ಎಲ್ಲಿಗೆ ಹೋಗುತ್ತಿದ್ದಾನೆ ಎಂದು ವಿಚಾರಿಸಿದರು. ಅದಕ್ಕೆ ಆತನು ನಾನು ಯಾಥ್ರಿಬ್‌ಗೆ ಕೆಲಸವನ್ನು ಹುಡುಕಲು ಹೋಗಲು ಬಯಸುತ್ತೇನೆ ಎಂದು ಉತ್ತರಿಸಿದನು. ಆದ್ದರಿಂದ ಆತನನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕರೆತರಲಾಯಿತು. ಆತನು ಹಝ್ರತ್ ಪೈಗಂಬರ್(ಸ) ಅವರಿಗೆ ತನ್ನ ಸಮೂದಾಯದ ಜನರ ಪರಿಸ್ಥಿತಿಗಳ ಬಗ್ಗೆ ತಿಳಿಸಿದನು. ಹಝ್ರತ್ ಪೈಗಂಬರ್(ಸ)ರು ಆತನನ್ನು ಇಸ್ಲಾಂ ಧರ್ಮಕ್ಕೆ ಆಹ್ವಾನಿಸಿದಾಗ, ಆತನು ತಕ್ಷಣವೇ ಮುಸಲ್ಮಾನರಾದನು. ಆತನು ಬನೂ ಸಅ್‌ಲಬ ಮತ್ತು ಬನೂ ಮಿಹ್ರಾಬ್ ಮೇಲೆ ದಾಳಿ ಮಾಡಲು ಹೊರಟಿರುವ ಪೈಗಂಬರ್(ಸ) ಅವರ ಉದ್ದೇಶದ ಬಗ್ಗೆ ತಿಳಿದಾಗ ಆತನು ಹಝ್ರತ್ ಪೈಗಂಬರ್(ಸ) ಅವರನ್ನು ಯಾ ರಸೂಲಲ್ಲಾಹ್(ಸ) ಅವರು ಖಂಡಿತವಾಗಿಯೂ ನಿಮ್ಮನ್ನು ಎಂದಿಗೂ ಎದುರಿಸುವುದಿಲ್ಲ. ನೀವು ಬರುವ ವಿಷಯ ಅವರು ತಿಳಿದರೆ ಅವರು ಓಡಿಹೋಗಿ ಆಸುಪಾಸಿನ ಪರ್ವತಗಳ ತುದಿಗೆ ಏರುತ್ತಾರೆ. ನಿಸ್ಸಂದೇಹವಾಗಿಯೂ ಅವರು ಮದೀನಾದ ಸುತ್ತಲೂ ದಾಳಿ ಮಾಡಲು ಬಯಸಿದ್ದರು ಆದರೆ ಅವರು ಮುಸ್ಲಿಮರನ್ನು ಎಂದಿಗೂ ಎದುರಿಸುವುದಿಲ್ಲ ಮತ್ತು ನಾನು ಕೂಡ ನಿಮ್ಮೊಂದಿಗೆ ಹೋಗುತ್ತಿದ್ದೇನೆ ಎಂದು ಹೇಳಿದನು. ಹಝ್ರತ್ ಪೈಗಂಬರ್(ಸ) ರವರು ಜಬ್ಬಾರ್‌ನನ್ನು ಬಿಲಾಲ್(ರ) ಅವರನ್ನು ಅರ್ಪಿಸಿದರು. ಆ ವ್ಯಕ್ತಿ ಮುಸ್ಲಿಮರನ್ನು ಬೇರೆ ದಾರಿಯಿಂದ ಕರೆದುಕೊಂಡು ಹೋಗಿ ಅವರ ಪ್ರದೇಶಕ್ಕೆ ಕರೆತಂದನು. ಇಸ್ಲಾಮಿನ ಸೈನ್ಯ ಬರುತ್ತಿರುವುದನ್ನು ಕಂಡು ಅಲ್ಲಿದ್ದ ಜನರು ಓಡಿ ಹೋಗಿ ಪರ್ವತಗಳನ್ನು ಏರಿದರು. ಹಝ್ರತ್ ಪೈಗಂಬರ್(ಸ)ರವರು ಮುಂದೆ ಸಾಗಿ ಧಿ ಅಮ್ರ್ ಎಂಬ ಚಿಲುಮೆಯ ಬಳಿ ತಲುಪಿದರು. ಅಲ್ಲಿ ತಂಗಿದರು. ಇದ್ದಕ್ಕಿದ್ದಂತೆ ಅಲ್ಲಿ ಜೋರಾಗಿ ಮಳೆ ಸುರಿಯಲಾರಂಭಿಸಿತು ಮತ್ತು ಹಝ್ರತ್ ಪೈಗಂಬರ್(ಸ.ಅ) ಮತ್ತು ಸಹಾಬಿಗಳ(ರ.ಅ) ಬಟ್ಟೆ ಒದ್ದೆಯಾಯಿತು. ಹಝ್ರತ್ ಪೈಗಂಬರ್(ಸ)ರವರು ತಮ್ಮ ಒದ್ದೆಯಾದ ಬಟ್ಟೆಗಳನ್ನು ಒಣಗಲು ಮರದ ಮೇಲೆ ಹಾಕಿ ಆ ಮರದ ಕೆಳಗೆ ವಿಶ್ರಾಂತಿಗಾಗಿ ಮಲಗಿದರು. ಇತರ ಸಹಾಬರವರು ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ಇಲ್ಲಿ ಪ್ರವಾದಿ(ಸ) ಅವರನ್ನು ಶಹೀದ್ ಮಾಡುವ ಅಪವಿತ್ರ ಯತ್ನ ನಡೆಯಿತು. ಖಡ್ಗಧಾರಿಯ ಘಟನೆಯ ಬಗ್ಗೆ ಹೀಗೆ ಬರೆಯಲಾಗಿದೆ. ಪರ್ವತಗಳ ತುದಿಯಲ್ಲಿ ಅಡಗಿಕೊಂಡಿದ್ದ ಈ ಜನರು ಪರ್ವತಗಳ ತುದಿಯಿಂದ ಹಝ್ರತ್ ಪೈಗಂಬರ್(ಸ) ಅವರ ಎಲ್ಲಾ ಚಲನವಲನಗಳನ್ನು ವೀಕ್ಷಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಒಂದೇ ಸ್ಥಳದಲ್ಲಿ ಒಬ್ಬಂಟಿಯಾಗಿ ಮಲಗಿರುವುದನ್ನು ಕಂಡ ಮಿಶ್ರಿಕೀನರು ತಮ್ಮ ನಾಯಕ ದು'ಸೂರಿನ ಬಳಿಗೆ ಬಂದರು. ಇವನು ಎಲ್ಲರಿಗಿಂತ ಧೈರ್ಯಶಾಲಿಯಾಗಿದ್ದನು.

ಮುಶ್ರಿಕೀನರು ಆವನಿಗೆ ಈ ಕ್ಷಣದಲ್ಲಿ ಹಝ್ರತ್ ಪೈಗಂಬರ್(ಸ) ಅವರು ಒಬ್ಬಂಟಿಯಾಗಿ ಮಲಗಿದ್ದಾರೆ ಎಂದು ಹೇಳಿದರು. ಈಗ ಅವರನ್ನು ನಿಭಾಯಿಸುವುದು ನಿಮ್ಮ ಕೆಲಸವಗಿದೆ ಎಂದರು. ಒಂದು ವರದಿಯಲ್ಲಿ, ದು'ಸೂರ್ ಸ್ವತಃ ಹಝ್ರತ್ ಪೈಗಂಬರ್(ಸ) ಅಲ್ಲಿ ಒಬ್ಬಂಟಿಯಾಗಿ ಮಲಗಿರುವುದನ್ನು ಕಂಡಾಗ, ನಾನು ಮುಹಮ್ಮದ್(ಸ) ಅವರನ್ನು ಈಗ ಕೊಲ್ಲದಿದ್ದರೆ ಅಲ್ಲಾಹನು ನನ್ನನ್ನು ಸರ್ವನಾಶ ಮಾಡುತ್ತಾನೆ ಎಂದು ಹೇಳಿದನು. ಆದಾಗ್ಯೂ, ಇದನ್ನು ಹೇಳಿದ ನಂತರ ದು'ಸೂರ್ ತನ್ನ ಕತ್ತಿಯನ್ನು ಬೀಸುತ್ತಾ ಹಝ್ರತ್ ಪೈಗಂಬರ್(ಸ)ರವರ ತಲೆಯ ಬಳಿಗೆ ಹೋಗಿ ನೀತುಕೊಂಡನು. ನಂತರ ಆತನು ಹಝ್ರತ್ ಪೈಗಂಬರ್(ಸ) ಅವರನ್ನು ಉದ್ದೇಶಿಸಿ ಈಗ ನಿಮ್ಮನ್ನು ನನ್ನಿಂದ ಯಾರು ರಕ್ಷಿಸುವರು? ಎಂದು ಹೇಳಿದನು. ಅದಕ್ಕೆ ಹಝ್ರತ್ ಪೈಗಂಬರ್(ಸ) ತೃಪ್ತಿಯಿಂದ ಹೇಳಿದರು: ಸರ್ವಶಕ್ತನಾದ ಅಲ್ಲಾಹನು ನಿನ್ನಿಂದ ನನ್ನನ್ನು ರಕ್ಷಿಸುವನು! ಈ ವೇಳೆ ಅವನು ನೆಲಕ್ಕೆ ಬಿದ್ದನು ಮತ್ತು ಅವನ ಕೈಯಿಂದ ಕತ್ತಿಯು ಸಹ ಬಿದ್ದಿತು. ಹಝ್ರತ್ ಪೈಗಂಬರ್(ಸ)ರು ತಕ್ಷಣವೇ ಆತನ ಕತ್ತಿಯನ್ನು ಎತ್ತಿಕೊಂಡು ಅವನಿಗೆ ಕೇಳಿದರು: ಈಗ ನನ್ನಿಂದ ನಿನ್ನನ್ನು ಯಾರು ರಕ್ಷಿಸುತ್ತಾರೆ? ಅದಕ್ಕೆ ದ'ಸೂರ್ ಹೇಳಿದನು **ಲಾ ಅಹದುನ್, ವಅನಾ ಅಶ್‌ಹದು ಅನ್‌ಲಾ ಇಲಾಹ ಇಲ್ಲಲ್ಲಾಹು ವ ಅನ್ನ ಮುಹಮ್ಮದನ್ ರಸೂಲಲ್ಲಾಹಿ, ವಲ್ಲಾಹಿ ಲುಕಸ್ಸಿರು ಅಲೈಕ ಜಮ್‌ಅನ್ ಅಬದಾ**. ಯಾರೂ ಇಲ್ಲ. ಈಗ ಯಾರೂ ನನ್ನನ್ನು ಉಳಿಸಲು ಸಾಧ್ಯವಿಲ್ಲ ಮತ್ತು ಅಲ್ಲಾಹನನ್ನು ಹೊರತುಪಡಿಸಿ ಯಾವುದೇ ದೇವರು ಇಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ಹೇಳುತ್ತೇನೆ. ಅಲ್ಲಾಹನ ಆಣೆ, ಭವಿಷ್ಯದಲ್ಲಿ ನಾನು ಎಂದಿಗೂ ನಿಮ್ಮ ವಿರುದ್ಧ ಜನರನ್ನು ಸಂಘಟಿಸುವುದಿಲ್ಲ. ಹೀಗೆ ಆತನು ಪ್ರತಿಜ್ಞೆ ಮಾಡಿದನು. ಹಝ್ರತ್ ಪೈಗಂಬರ್(ಸ) ಅವನಿಗೆ ಆತನ ಕತ್ತಿಯನ್ನು ನೀಡಿದರು ಮತ್ತು ಮತ್ತೊಂದು ವರದಿಯಲ್ಲಿ ದ'ಸೂರ್ ಹಝ್ರತ್ ಪೈಗಂಭರ್(ಸ) ಅವರ ಕಡೆಗೆ ತಿರುಗಿ ಹೀಗೆ ಹೇಳಿದನು: ಅಲ್ಲಾಹನ ಆಣೆ! ನೀವು(ಸ) ಇಹ್ಸಾನ್ ಮಾಡುವುದರಲ್ಲಿ ನನ್ನಿಂದ ಉತ್ತಮರಾಗಿದ್ದೀರಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು **ಅನಾ ಅಹಖ್ಖು ಬಿಝಾಲಿಕ ಮಿನ್‌ಕ** ಎಹ್ಸಾನ್ ಮಾಡುವುದರಲ್ಲಿ ನಾನು ನಿನ್ನಿಂದ ಹೆಚ್ಚು ಹಕ್ಕನ್ನು ಹೊಂದಿದ್ದೇನೆ. ನಂತರ ದ'ಸೂರ್ ತನ್ನ ಸಮೂದಾಯದ ಜನರ ಬಳಿಗೆ ಮರಳಿ ಬಂದನು. ಆದರೆ ಅವನ ಸ್ವಭಾವವು ಬಹಳ ಬದಲಾಗಿತ್ತು ಆತನು ತನ್ನ ಜನರಿಗೆ ಉಪದೇಶ (ತಬ್ಲೀಗ್) ಮಾಡುತ್ತಿದ್ದನು. ದು'ಸೂರ್‌ನೊಂದಿಗೆ ಏನಯಿತು ಹೇಗಾಯಿತು ಎಂದು ಸಂಪೂರ್ಣ ಘಟನೆಯನ್ನು ಜನರಿಗೆ ತಿಳಿಸುತ್ತಿದ್ದನು. ಆತನು ಹೇಗೆ ಬಿದ್ದೆ ಎಂಬ ಘಟನೆಯನ್ನು ಹೀಗೆ ವಿವರಿಸುತ್ತಿದ್ದನು: ನಾನು ಅಲ್ಲಿ ಒಬ್ಬ ಎತ್ತರದ ಮನುಷ್ಯನನ್ನು ನೋಡಿದೆ. ನಾನು ಅಲ್ಲಿ ಕತ್ತಿ ಹಿಡಿದು ನಿಂತಿದ್ದಾಗ ಅಲ್ಲಿಗೆ ಒಬ್ಬ ತುಂಬಾ ಎತ್ತರದ ವ್ಯಕ್ತಿ ಬಂದಿರುವುದು ಕಂಡಿತು. ಅವನು ನನ್ನ ಎದೆಯನ್ನು ತಳ್ಳಿದನು ಮತ್ತು ನಾನು ನನ್ನ ಬೆನ್ನಿನ ಮೇಲೆ ಬಿದ್ದೆ. ಆಗ ನನಗೆ ಅರಿವಾಯಿತು ಅದು ಮನುಷ್ಯನಲ್ಲ, ದೇವದೂತನು ಎಂದು. ಆದ್ದರಿಂದ, ಆ ಸಮಯದಲ್ಲಿ, ನಾನು ಅಲ್ಲಾಹನನ್ನು ಹೊರತುಪಡಿಸಿ ಬೇರೆ ದೇವರಿಲ್ಲ ಮತ್ತು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿವಸಲ್ಲಮರು) ಅಲ್ಲಾಹನ ಸಂದೇಶವಾಹಕರು ಎಂದು ಒಪ್ಪಿಕೊಂಡೆ. ಮುಂದೆ ಅವನು ಹೇಳುತ್ತಾನೆ ಅಲ್ಲಾಹ ಆಣೆ! ನನು ಅವರ ವಿರುದ್ಧ ಯಾವತ್ತೂ ಯವುದೇ ರೀತಿಯಲ್ಲಿ ಹೋರಾಡುವುದಿಲ್ಲ. ತದನಂತರ ಅವನು ತನ್ನ ಜನರನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸಲು ಪ್ರಾರಂಭಿಸಿದನು. ಅಲ್ಲಾಹನು ಅವನ ಮೂಲಕ ಅನೇಕ ಜನರಿಗೆ ಮಾರ್ಗದರ್ಶನ ನೀಡಿದನು. ಆದಾಗ್ಯೂ, ಅದರ ನಂತರ, ಹಝ್ರತ್ ಪೈಗಂಬರ್(ಸ)ರು ಮದೀನಾಗೆ ಹಿಂತಿರುಗಿದರು ಮತ್ತು ಯಾವುದೇ ಹೋರಾಟವಿರಲಿಲ್ಲ. ಈ ಅಭಿಯಾನಕ್ಕಾಗಿ, ಅವರು 11 ದಿನಗಳ ಕಾಲ ಮದೀನಾದಿಂದ ಹೊರಗಿದ್ದರು ಮತ್ತು ಒಂದು ವರದಿಯ ಪ್ರಕಾರ, ಅವರು 15 ದಿನಗಳ ಕಾಲ ಮದೀನಾದಿಂದ ಹೊರಗಿದ್ದರು ಮತ್ತು ಅಬು ಉಮರ್(ರ) ಹೇಳುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ನಜ್ದ್‌ನಲ್ಲಿ ಸಫರ್ ತಿಂಗಳು ಪೂರ್ತಿ ತಂಗಿದ್ದರು. ಆದಾಗ್ಯೂ, ವಿಭಿನ್ನ ವರದಿಗಳಿವೆ, ಆದರೆ ಇದು ಕೆಲವೇ ದಿನಗಳ ಪ್ರಯಾಣವಾಗಿತ್ತು.

ಕೆಲವು ವಿದ್ವಾಂಸರು ಹಝ್ರತ್ ಪೈಗಂಬರ್(ಸ) ಅವರ ಮೇಲೆ ಕತ್ತಿಯನ್ನು ಎಳೆಯುವ ಘಟನೆಯನ್ನು ಗ಼ಝ್ವ ಝಾತ್ ಅಲ್-ರಕ್ಕಾದ ಘಟನೆ ಎಂದು ಹೇಳಿದ್ದಾರೆ, ಆದರೆ ಹೆಚ್ಚಿನ ಸಂಶೋಧಕರು ಅದನ್ನು ಒಂದೇ ಘಟನೆ ಎಂದು ಗುರುತಿಸಿದ್ದಾರೆ. ಎರಡೂ ಘಟನೆಗಳು ಎರಡು ಪ್ರತ್ಯೇಕ ಯುದ್ಧಗಳಾಗಿವೆ. ಘಝ್ವಾ ಝಾತ್ ಅಲ್-ರಕ್ಕಾ ಸಂದರ್ಭದಲ್ಲಿ ದಾಳಿ ಮಾಡಿದ ವ್ಯಕ್ತಿಯ ಹೆಸರನ್ನು ಘೋರಸ್ ಎಂದು ಉಲ್ಲೇಖಿಸಲಾಗಿದೆ ಮತ್ತು ಅವನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದನೆಂದು ಹೇಳಲಾಗುತ್ತದೆ ಮತ್ತು ಅವನು ಇಸ್ಲಾಂ ಧರ್ಮವನ್ನು ಸ್ವೀಕರಿಸಲಿಲ್ಲ ಎಂದು ಸಹ ಹೇಳಲಾಗುತ್ತದೆ. ಆದರೆ, ಭವಿಷ್ಯದಲ್ಲಿ ಅವರ ವಿರುದ್ಧ ಎಂದಿಗೂ ಹೋರಾಡುವುದಿಲ್ಲ ಎಂದು ಭರವಸೆ ನೀಡಿದ್ದನು. ಬುಖಾರಿಯ ವರದಿಯೂ ಹೀಗೇಯೇ ಇದೆ. (ಸೀರತುಲ್ ಹಲಬೀಯ, ಸಂಘುಟ-2, ಪುಟ-290, ದರುಲ್ ಕುತುಬ್ ಇಲ್‌ಮಿಯ) (ಸಬ್ಲುಲ್ ಹುದಾ ವರ್‌ರ್ರಶ್ಮಾದ್, ಸಂಪುಟ-4, ಪುಟ-176, ದರುಲ್ ಕುತುಬ್ ಇಲ್‌ಮಿಯ) (ಸೀರತ್ ಇನ್‌ಸೈಕ್ಲೋಪೀಡಿಯಾ, ಸಂಪುಟ-6, ಪುಟ-71, ದಾರುಲ್ ಮುಆರಿಫ್) (ಶರಹ್ ಅಝ್ಝುರ್‌ಖಾನಿ, ಸಂಪುಟ-2, ಪುಟ-381-382, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಮಗ್ಝಾರಿಖಿ, ಹದೀಸ್-4136)

ಈ ಅವಧಿಯ ಘಟನೆಗಳಲ್ಲಿ, ಹಝ್ರತ್ ರುಖಯ್ಯ(ರ) ನಿಧನರಾದರು ಮತ್ತು ಹಝ್ರತ್ ಉಮ್ಮೆ ಕುಲ್‌ಸೂಮ್(ರ) ವಿವಾಹವಾದ ಘಟನೆಯೂ ಇದೆ, ಅದರ ವಿವರಣೆ ಹೀಗಿದೆ: ಉಬೈದುಲ್ಲಾ ಬಿನ್ ಮುಕಾನಿಫ್ ಬಿನ್ ಹರಿಸಾ ಅನ್ಸಾರಿ ವರದಿ ಮಾಡುತ್ತಾರೆ, ಹಝ್ರತ್ ಪೈಗಂಬರ್(ಸ) ಅವರು ಬದರ್ ಯುದ್ಧಕ್ಕೆ ಹೊರಡಿದಗ ಹಝ್ರತ್ ಉಸ್ಮಾನ್(ರ) ಅವರನ್ನು ತಮ್ಮ ಪುತ್ರಿ ರುಖೈಯ(ರ) ಅವರ ಬಳಿ ಬಿಟ್ಟರು. ಹಝ್ರತ್ ಝೈದ್ ಬಿನ್ ಹರಿಸಾ(ರ) ಅವರು ಬದ್ರ್‌ನಲ್ಲಿ ಹಝ್ರತ್ ಪೈಗಂಬರ್(ಸ) ಅವರಿಗೆ ಅಲ್ಲಾಹನು ದಯಪಾಲಿಸಿದ ವಿಜಯದ ಸುವಾರ್ತೆಯೊಂದಿಗೆ ಮದೀನಾಗೆ ಬಂದ ದಿನವೇ ಅವರು ಅನಾರೋಗ್ಯದಿಂದ ಮರಣಹೊಂದಿದರು. ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಉಸ್ಮಾನ್(ರ) ಅವರಿಗೆ ಬದ್ರ್‌ನ ಯುದ್ಧ ಸಂಪತ್ತಿನಲ್ಲಿ ಪಾಲನ್ನು ನಿಗದಿಪಡಿಸಿದರು ಮತ್ತು ಅವರ ಪಾಲು ಬದ್ರ್ ಯುದ್ಧದಲ್ಲಿ ಭಾಗವಹಿಸಿದವರಿಗೆ ಸಮನಾಗಿತ್ತು. ಹಝ್ರತ್ ರುಖಯ್ಯ(ರ) ಅವರ ನಿಧನದ ನಂತರ, ಹಝ್ರತ್ ಪೈಗಂಬರ್(ಸ)ರು ತಮ್ಮ ಪುತ್ರಿ ಉಮ್ಮೆ ಕುಲ್ಸೂಮ್ ಅವರನ್ನು ಹಝ್ರತ್ ಉತ್ಮಾನ್ ಬಿನ್ ಅಫ್ಫಾನ್(ರ) ಅವರೊಂದಿಗೆ ವಿವಾಹ ಮಡಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾದ್, ಭಾಗ-3, ಪುಟ-41, ದರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬೂಹುರೈರ(ರ) ವರದಿ ಮಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಉಸ್ಮಾನ್(ರ)ರನ್ನು ಮಸೀದಿಯ ಬಗಿಲಲ್ಲಿ ಭೇಟಿಯಾಗಿ ಹೀಗೆ ಹೇಳಿದರು: ಉಸ್ಮನ್ ಇವರು ಜಿಬ್ರೀಲ್ ಆಗಿದ್ದಾರೆ ಅವರು ನನಗೆ ಅಲ್ಲಾಹನು ಉಮ್ಮು ಕುಲ್ಸುಮ್‌ಳ ನಿಕಾಹನ್ನು ನಿಮ್ಮೊಂದಿಗೆ ರುಖಿಯಳಿಗೆ ಕೊಟ್ಟಷ್ಟೇ ಹಕ್ ಮಹರ್‌ನೊಂದಿಗೆ ಮತ್ತು ಅವಳೊಂದಿಗೆ ಉತ್ತಮವಾಗಿ ವರ್ತಿಸುತ್ತೀರಿ ಎಂಬ ನಿಬಂಧನೆಯೊಂದಿಗೆ ಮಾಡಿಸಿರುವನು ಎಂದು ಹೇಳಿದ್ದಾರೆ. (ಸುನನ್ ಇಬ್ನೆ ಮಾಜ, ಇಫ್ತಿತಾಹುಲ್ ಕಿತಾಬ್, ಹದೀಸ್-110) ಬೇರೆ ರೀತಿಯಲ್ಲಿ ಹೇಳುವುದಾದರೆ, ಸರ್ವಶಕ್ತನಾದ ಅಲ್ಲಾಹನು ಎರಡನೇ ಮಗಳನ್ನು ಹಝ್ರತ್ ಉಸ್ಮಾನ್(ರ) ಅವರೊಂದಿಗೆ ವಿವಹವಾಗಬೇಕೆಂದು ಹೇಳಿದನು.

ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಉಮ್ಮೆ ಕುಲ್ಸೂಮ್(ರ)ರ ವಿವಾಹವನ್ನು ಹಝ್ರತ್ ಉಸ್ಮಾನ್(ರ) ಅವರೊಂದಿಗೆ ಮಡಿಸಿದಗ ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಉಮ್ಮೆ ಐಮಾನ್(ರ) ಅವರಿಗೆ ಹೇಳಿದರು: ನನ್ನ ಪುತ್ರಿ ಉಮ್ಮು ಕುಲ್ಸೂಮ್ ಅನ್ನು ಸಿದ್ಧಪಡಿಸಿ ಉಸ್ಮಾನ್ ಅವರ ಬಳಿ ಬಿಟ್ಟು ಬನ್ನಿ ಮತ್ತು ಆಕೆಯ ಮುಂದೆ ದಫ್ ಅನ್ನು ಸಹ ಹೊಡೆಯಿರಿ. ಹೀಗಗಿ ಅವರು ಹಾಗೆಯೇ ಮಡಿದರು.

ವಿವಾಹದ ಮೂರು ದಿನಗಳ ನಂತರ ಹಝ್ರತ್ ಪೈಗಂಬರ್(ಸ) ಉಮ್ಮು ಕುಲ್ಸುಮ್(ರ)ರ ಬಳಿಗೆ ಹೋಗಿ ಹೀಗೆ ಕೇಳಿದರು: ಎಲ್ಲೆ ನನ್ನ ಪುತ್ರೀ, ನಿನ್ನ ಪತಿ ಹೇಗಿರುವರು? ಆಗ ಉಮ್ಮು ಕುಲ್ಸುಮ್(ರ) ಹೇಳಿದರು: ಉಸ್ಮಾನ್ ಅತ್ಯುತ್ತಮ ಪತಿಯಾಗಿರುವರು. (ಸೀರ'ತ್ ಅಮೀರುಲ್ ಮುಮಿನೀನ್ ಉಸ್ಮನ್ ಬಿನ್ ಅಫ್ಫಾನ್(ರ), ಅಲೀ ಮುಹಮ್ಮದ್ ಅಸ್ಸಲಬಿ, ಪುಟ-41, ಹಿಜರಿ 3, ದಾರುಲ್ ಮಾರಿಫ ಬೈರೂತ್ 2006)

ಹಝ್ರತ್ ಉಮ್ಮೆ ಕಲ್ಸೂಮ್(ರ) ಅವರು ಒಂಬತ್ತು ಹಿಜ್ರಿ ತನಕ ಹಝ್ರತ್ ಉಸ್ಮಾನ್(ರ) ರೊಂದಿಗೆ ಇದ್ದರು. ಅದರ ನಂತರ ಅವರು ಅನಾರೋಗ್ಯಕ್ಕೆ ಒಳಗಾಗಿ ನಿಧನರಾದರು. ಹಝ್ರತ್ ಪೈಗಂಬರ್(ಸ)ರವರು ಅವರ ನಮಝೆ ಜನಾಝವನ್ನು ನಿರ್ವಹಿಸಿ ಅವರ ಖಬರ್ ಬಳಿ ಕುಳಿತುಕೊಂಡರು. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಉಮ್ಮೆ ಕುಲ್ಸೂಮ್(ರ)ರವರ ಖಬರ್ ಬಳಿ ಕುಳಿತುಕೊಂಡಿದ್ದನ್ನು ಕಂಡಾಗ ಅವರ ಕಣ್ಣುಗಳು ಕಂಬನಿಯಿಂದ ತುಂಬಿದ್ದವು. (ಸೀರ'ತ್ ಮಈರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಅಲೀ ಮುಹಮ್ಮದ್

ಅಸ್ಸಲಾಬಿ, ಪುಟ-42, ದಾರುಲ್-ಮರಾಫತ್ ಬೈರುತ್ 2006)

ಬುಖಾರಿಯ ಒಂದು ವರದಿಯಲ್ಲಿ, ಈ ಘಟನೆಯನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ: ಹಿಲಾಲ್ ಹಝ್ರತ್ ಅನಸ್ ಬಿನ್ ಮಾಲಿಕ್(ರ) ಅವರಿಂದ ವರದಿ ಮಾಡುತ್ತಾರೆ, ಅವರು ಹೇಳುತ್ತಾರೆ ನಾವು ಹಝ್ರತ್ ಪೈಗಂಬರ್(ಸ)ರವರ ಪುತ್ರಿಯ ಜನಾಝದಲ್ಲಿ ಭಾಗವಹಿಸಿದ್ದೆವು. ಹಝ್ರತ್ ಪೈಗಂಭರ್(ಸ)ರವರು ಖಬರ್ ಬಳಿ ಕುಳಿತಿದ್ದಾರೆ ಮತ್ತು ಅವರ ಕಣ್ಣುಗಳು ಕಣ್ಣೀರು ಸುರಿಸುತ್ತಿರುವುದನ್ನು ನಾನು ನೋಡಿದೆ. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಜನಾಎಝ್, ಹದೀಸ್ ಸಂಖ್ಯೆ-1342)

ಹಝ್ರತ್ ಉಮ್ಮು ಕುಲ್ಸುಮ್(ರ) ನಿಧನಗೊಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಮೂರನೇ ಪುತ್ರಿ ಇರುತ್ತಿದ್ದರೆ, ಅವಳ ವಿವಾಹವನ್ನು ಕೂಡ ಉಸ್ಮಾನ್(ರ)ರೊಂದಿಗೆ ಮಾಡಿಸುತ್ತಿದ್ದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಭಾಗ-3, ಪುಟ-41, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಹಝ್ರತ್ ಇಬ್ನೆ ಅಬ್ಬಾಸ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ)ರು ಒಂದು ಸ್ಥಳದಿಂದ ಹಾದುಹೋಗುತ್ತಿದ್ದಾಗ ನೋಡಿದರು ಹಝ್ರತ್ ಉಸ್ಮಾನ್(ಸ) ಅಲ್ಲಿ ಕುಳಿತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ಅವರ ಪುತ್ರಿ ಹಝ್ರತ್ ಉಮ್ಮೆ ಕುಲ್ಸೂಮ್(ರ) ನಿಧನದ ದುಃಖದಲ್ಲಿ ಅಳುತ್ತಿದ್ದರು. ವರದಿಗಾರರು ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇನ್ನಿಬ್ಬರು ಸಹಾಬಿಗಳು ಜೊತೆಗಿದ್ದರು ಅವರಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಇದ್ದರು. ಹಝ್ರತ್ ಪೈಗಂಬರ್(ಸ) ಕೇಳಿದರು ಎಲೈ ಉಸ್ಮಾನ್! ನೀವು ಯಾವ ಕಾರಣದಿಂದ ಅಳುತ್ತಿದ್ದೀರಿ? ಅದಕ್ಕೆ ಹಝ್ರತ್ ಉಸ್ಮಾನ್(ರ) ಹೇಳಿದರು ಯಾ ರಸೂಲಲ್ಲಾಹ್(ಸ)!! ನಿಮ್ಮೊಂದಿಗೆ ಇದ್ದ ನನ್ನ ಅಳಿಯನ ಸಂಬಂಧವು ಕೊನೆಗೊಂಡಿತು ಎಂದು ನಾನು ಅಳುತ್ತಿದ್ದೇನೆ. ಇಬ್ಬರು ಪುತ್ರಿಯರನ್ನು ನಾನು ವಿವಾಹವಾಗಿದ್ದೆ ಅವರಿಬ್ಬರು ನಿಧನಹೊಂದಿದರು. ಈಗ ಅಳಿಯನ ಸಂಬಂಧ ಅಂತ್ಯಗೊಂಡಿದೆ. ಅದಕ್ಕೆ ಹಝ್ರತ್ ಪೈಗಂಬರ್(ಸ)ರವರು ಹೇಳಿದರು ಅಳಬೇಡಿ.

ಯಾರ ಶಕ್ತಿಯಲ್ಲಿ ನನ್ನ ಜೀವನವಿದೆಯೋ ಅವನ ಪ್ರಮಾಣ ಮಾಡಿ ಹೇಳುತ್ತೇನೆ, ನನಗೆ ನೂರು ಹೆಣ್ಣುಮಕ್ಕಳಿರುತ್ತಿದ್ದರೆ ಮತ್ತು ಅವರು ಒಬ್ಬೊಬ್ಬರಾಗಿ ನಿಧನ ಹೊಂದುತ್ತಿದ್ದರೂ, ನೂರು ಮಂದಿಯಲ್ಲಿ ಒಬ್ಬರೂ ಉಳಿಯದ ತನಕ ನಾನು ಅವರಲ್ಲಿ ಪ್ರತಿಯೊಬ್ಬರನ್ನು ನಿಮಗೆ ಮದುವೆ ಮಾಡಿಕೊಡುತ್ತಿದ್ದೆ. (ಕಂಝುಲ್ ಅಲ್‌ಮಾಲ್, ಭಾಗ-13, ಪುಟ-21, ಕಿತಾಬುಲ್ ಫಝಾಎಲ್, ಫಝಾಎಲುಸ್ಸಹಾಬ, ಹದೀಸ್-36201, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2004)

ಆದಾಗ್ಯೂ, ಇದು ಎರಡೂ ಕಡೆಯಿಂದ ಪ್ರೀತಿ ಮತ್ತು ಸಂಬಂಧದ ಅಭಿವ್ಯಕ್ತಿಯಾಗಿತ್ತು. ಈಗ ಅಳಿಯನ ಸಂಬಂಧವು ಕೊನೆಗೊಂಡಿದೆ ಎಂದು ಹಝ್ರತ್ ಉಸ್ಮಾನ್(ರ) ದುಃಖಿತರಾಗಿದ್ದರು, ಆದರೆ ಈ ಸಂಬಂಧವನ್ನು ಸ್ಥಾಪಿಸಲಾಗಿದೆ ಎಂದು ಹಝ್ರತ್ ಪೈಗಂಬರ್(ಸ)(ಸ) ಅವರಿಗೆ ಭರವಸೆ ನೀಡಿದರು, ನೀವು ಅದರ ಬಗ್ಗೆ ಚಿಂತಿಸಬೇಡಿ ಎಂದು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹಝ್ರತ್ ಉಮ್ಮು ಕುಲ್‌ಸುಮ್(ರ)ರ ವಿವಾಹದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಪುತ್ರಿಯೂ ಹಝ್ರತ್ ಉಸ್ಮಾನ್(ರ) ಪತ್ನಿಯೂ ಆದ ಹಝ್ರತ್ ರುಖಿಯ(ರ)ರ ನಿಧನದ ನಂತರ ಹಝ್ರತ್ ಫಾತಿಮ(ರ)ರಿಗಿಂತ ಹಿರಿಯರೂ ಮತ್ತು ಹಝ್ರತ್ ರುಖಿಯ(ರ)ರಿಗಿಂತ ಕಿರಿಯರೂ ಆದ ಹಝ್ರತ್ ಪೈಗಂಬರ್(ಸ)ರ ಎರಡನೇ ಪುತ್ರಿಯಾದ ಉಮ್ಮೇ ಕುಲ್ಸುಮ್(ರ)ರ ವಿವಾಹವನ್ನು ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್(ರ)ರೊಂದಿಗೆ ಮಾಡಿಸಿದರು. ಇದೇ ಕಾರಣದಿಂದ ಹಝ್ರತ್ ಉಸ್ಮಾನ್(ರ)ರನ್ನು ದ್ಸುನ್ನೂರೈನ್ ಎಂದು ಕರೆಯಲಾಗುತ್ತದೆ. ಎಂದರೆ ಎರಡು ಪ್ರಕಾಶಗಳು ಹೊಂದಿರುವ ವ್ಯಕ್ತಿ. ಹಝ್ರತ್ ಉಮ್ಮು ಕುಲ್ಸುಮ್(ರ)ರ ವಿವಾಹ ಹಿಜರೀ 3, ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆದಿತ್ತು. ಇದು ಹಝ್ರತ್ ಉಮ್ಮು ಕುಲ್ಸುಮ್(ರ)ರ ಎರಡನೇ ವಿವಾಹವಾಗಿತ್ತು. ಇದಕ್ಕಿಂತ ಮೊದಲು ಹಝ್ರತ್ ರುಖಿಯ(ರ)ರ ಮತ್ತು ಹಝ್ರತ್ ಉಮ್ಮು ಕುಲ್ಸುಮ್(ರ)ರ ನಿಕಾಹ್ ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರಾದ ಅಬೂಲಹಬ್‌ರ ಇಬ್ಬರು ಪುತ್ರರ ಜೊತೆಗೆ ಆಗಿತ್ತು. ಆದರೆ ವಿವಾಹವಾಗುವುದಕ್ಕೆ ಮುಂದೆ ಧಾರ್ಮಿಕ ವ್ಯತ್ಯಾಸದ ಕಾರಣದಿಂದ ಆ ನಿಕಾಹ್ ಕೊನೆಗೊಂಡಿತು. ಹಝ್ರತ್ ಪೈಗಂಬರ್(ಸ) ರವರು ಮೊದಲು ಹಝ್ರತ್ ಉಸ್ಮಾನ್(ರ) ಅವರನ್ನು ರುಖಿಯ(ರ) ರನ್ನು ವಿವಾಹ ಮಾಡಿಸಿದರು ಮತ್ತು ರುಖಿಯ(ರ) ಅವರ ನಿಧನದ ನಂತರ ಅವರು ಉಮ್ಮೆ ಕುಲ್ಸೂಮ್(ರ) ಅವರನ್ನು ವಿವಾಹ ಮಾಡಿಸಿದರು, ಆದರೆ ವಿಷಾದದ ಸಂಗತಿ ಎಂದರೆ ಈ ಇಬ್ಬರೂ ಪತ್ರಿಯರ ಸಂತತಿಗಳು ನಡೆಯಲಿಲ್ಲ ಏಕೆಂದರೆ ಉಮ್ಮೆ ಕುಲ್ಸೂಮ್(ರ) ಅವರಿಗೆ ಯಾವ ಮಕ್ಕಳು ಜನಿಸಲಿಲ್ಲ ಮತ್ತು ರುಖಿಯ(ರ)ರವರ ಪುತ್ರ ಅಬ್ದುಲ್ಲಾ ಆರನೇ ವಯಸ್ಸಿನಲ್ಲಿ ನಿಧನನಾದನು. ಉಮ್ಮೆ ಕುಲ್ಸೂಮ್‌ರ ನಿಕಾಹ್ ರಬೀಉಲ್ ಅವ್ವಲ್ 3 ಹಿಜರಿಯಲ್ಲಿ ನಡೆಯಿತು. (ಸೀರತ್ ಖಾತಮನ್ನಬೀಈನ್(ಸ), ಪುಟ-463-464)

ಆ ಕಾಲಘಟ್ಟದ ಘಟನೆಗಳಲ್ಲಿ ಗಝ್ವ ಬನೂ ಬುಹ್ರಾನ್‌ನ ಪ್ರಸ್ತಾಪವು ಇದೆ. ಇದನ್ನು ಬುಹ್ರಾನ್ ಅಲ್ಲದೆ ಫುರುಅ ಯುದ್ಧ ಮತ್ತು ಬನೂಸುಲೈಮ್ ಯುದ್ಧ ಎಂದು ಸಹ ಕರೆಯಲಾಗುತ್ತದೆ. ಬುಹ್ರಾನ್ ಫುರುಅ ಕಣಿವೆಯ ಸಮೀಪದಲ್ಲಿರುವ ಹಿಜಾಝ್ ಸಮೂದಾಯದವರ ಒಂದು ಖನಿಜ ಗಣಿಯಾಗಿದೆ ಮತ್ತು ಫುರ್‌ಅ ಕಣಿವೆಯು ಮದೀನದಿಂದ 96 ಮೈಲಿ ದೂರದಲ್ಲಿದೆ.

ಬನೂ ಸುಲೈಮ್ ಗೋತ್ರದ ಒಂದು ದೊಡ್ಡ ಸಂಘ ಮುಸ್ಲಿಮರ ವಿರುದ್ಧ ಒಟ್ಟು ಸೇರಿದ್ದಾಗಿ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಆಗ ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಅಬ್ದುಲ್ಲಾಹ್ ಬಿನ್ ಉಮ್ಮು ಮಕ್ತೂಮ್(ರ)ರನ್ನು ತನ್ನ ಪ್ರತಿನಿಧಿಯನ್ನಾಗಿ ನಿಶ್ಚಯಿಸಿ ಮುನ್ನೂರು ಸಹಾಬಿಯರು ಜೊತೆಗೆ ಜಮಾದಿಯುಲ್ ಊಲ ಆರರಲ್ಲಿ ಹೊರಟರು. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದ್ದರು ಎಂದಿದೆ. ಮಾರ್ಗದಲ್ಲಿ ಹಝ್ರತ್ ಪೈಗಂಬರ್(ಸ) ಬನೂ ಸುಲೈಮಿನ ಒಬ್ಬ ವ್ಯಕ್ತಿಯನ್ನು ಭೇಟಿಯಾದರು. ಬನೂ ಸುಲೈಮಿನ ಸಂಘ ಚದುರಿ ಹೋಯಿತು ಎಂದು ಆತನು ತಿಳಿಸಿದನು. ಆತನು ನೀಡಿದ ಮಾಹಿತಿ ಸರಿಯೆಂದು ತನಿಖೆ ನಡೆಸಿದಾಗ ತಿಳಿದುಬಂತು. ಹೀಗೆ ಹಝ್ರತ್ ಪೈಗಂಬರ್(ಸ) ಮರಳಿಹೋದರು. ಯುದ್ಧ ನಡೆಸಬೇಕಾಗಿ ಬರಲಿಲ್ಲ. ಹಝ್ರತ್ ಪೈಗಂಬರ್(ಸ) ಅವರು ಜುಮಾದಿಉಲ್ ಅವ್ವಲ್ 6 ರದು ಮದೀನಾದಿಂದ ಈ ಅಭಿಯಾನಕ್ಕಾಗಿ ಹೊರಟರು ಮತ್ತು ಹತ್ತು ರಾತ್ರಿಯ ನಂತರ ಅವರು ಜುಮಾದಿಉಲ್ ಅವ್ವಲ್ 16 ರಂದು ಹಿಂತಿರುಗಿದರು. ಇದಕ್ಕೆ ತದ್ವಿರುದ್ಧವಾಗಿ, ಇಬ್ನ್ ಇಸ್‌ಹಾಖ್ ಅವರು ಹಝ್ರತ್ ಪೈಗಂಬರ್(ಸ) ಅವರು ಖುರೈಷಿಗಳ ವ್ಯಾಪಾರ ಕಾರವಾನ್ ಅನ್ನು ಹಿಜಾಝ್‌ನ ಫುರುಅ ಕಣಿಯ ಹೊರವಲಯದಲ್ಲಿರುವ ಗಣಿಯಾಗಿರುವ ಬುಹ್ರಾನ್ ತಲುಪುವವರೆಗೆ ತಡೆಯಲು ಬಯಸಿದ್ದರು ಎಂದು ಹೇಳಿದ್ದಾರೆ. ಹೀಗಾಗಿ ಅವರು ರಬೀಉಲ್ ಆಖಿರ್ ಮತ್ತು ಜುಮಾದಿಉಲ್ ಅವ್ವಲ್ ಎರಡು ತಿಂಗಳ ಕಾಲ ಅಲ್ಲಿಯೇ ಇದ್ದರು ಮತ್ತು ನಂತರ ಅವರು ಮದೀನಾಕ್ಕೆ ಮರಳಿದರು. ಈ ಸಮಯದಲ್ಲಿ ಯಾವುದೇ ಯುದ್ಧ ನಡೆಯಲಿಲ್ಲ. (ಶರಹ್ ಝುರ್ಖಾನಿ ಅಲಲ್ ಮವಾಹಿಬ್ ಲಿದ್ದುನಿಯಾ, ಸಂಪುಟ-2, ಪುಟ-382-383, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1996) (ಸೀರತ್ ಇಬ್ನ್ ಹಿಶಾಮ್, ಪುಟ-513, ದಾರುಲ್ ಕುತುಬ್ ಇಲ್ಮಿಯ 2001) (ಫರ್ಹಾಂಗ್ ಸೀರತ್, ಪುಟ-226, ಝೋವರ್ ಅಕಾಡೆಮಿ ಕರಾಚಿ 2003)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಬುಹ್ರಾನ್ ಯುದ್ಧವನ್ನು ಈ ಕೆಳಗಿನ ರೀತಿಯಲ್ಲಿ ವಿವರಿಸಿದ್ದಾರೆ: ಧೀ ಅಮ್ರ್ ಯುದ್ಧ ನಡೆದು ಹೆಚ್ಚು ಸಮಯ ಕಳೆದಿರಲಿಲ್ಲ, ಅಂದರೆ, ಮೂರನೇ ಹಿಜ್ರಿಯಲ್ಲಿ ರಬೀಉಲ್ ಅವ್ವಲ್‌ನ ಕೊನೆಯಲ್ಲಿ, ಹಝ್ರತ್ ಪೈಗಂಬರ್(ಸ) ಅವರಿಗೆ ಬನೂಸುಲೈಮ್ ಮತ್ತೆ ಬುಹ್ರಾನ್‌ನಲ್ಲಿ ಮದೀನಾದ ಮೇಲೆ ಹಠಾತ್ ದಾಳಿಯ ಉದ್ದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ ಮತ್ತು ಅವರೊಂದಿಗೆ ಕುರೈಶಿಗಳ ಗುಂಪು ಇದೆ ಎಂಬ ಭಯಾನಕ ಸುದ್ದಿಯಲ್ಲಿ ಕೇಳಿದರು. ದುರದೃಷ್ಟವಶಾತ್, ಅವರು ತಮ್ಮ ಸಹಚರರ ಗುಂಪಿನೊಂದಿಗೆ ಮದೀನಾವನ್ನು ತೊರೆದನು, ಆದರೆ ಎಂದಿನಂತೆ, ಅರೇಬಿಯಾದ ಈ ಕಾಡುಮೃಗಗಳು ತಮ್ಮ ಬೇಟೆಯನ್ನು ಹಠಾತ್ ಆಗಿ ಮತ್ತು ನಿರ್ಲಕ್ಷದ ಸ್ಥಿತಿಯಲ್ಲಿ ಆಕ್ರಮಣ ಮಾಡಲು ಅವಕಾಶವನ್ನು ಬಯಸಿದವು, ಅವರ ಆಗಮನದ ಸುದ್ದಿಯನ್ನು ಪಡೆದುಕೊಂಡು ಅಲ್ಲಿ ಇಲ್ಲಿ ಚದುರಿಹೋದರು. ಹಝ್ರತ್ ಪೈಗಂಬರ್(ಸ) ಅಲ್ಲಿ ಸ್ವಲ್ಪ ಕಾಲ ಇದ್ದು ಹಿಂದಿರುಗಿದರು.

ಮದೀನಾವನ್ನು ಪದೇ ಪದೇ ಆಕ್ರಮಣ ಮಾಡುವ ಉದ್ದೇಶದಿಂದ ಬನೂಸುಲೈಮ್ ಮತ್ತು ಬನೂ ಗ್ರತ್‌ಫಾನ್‌ನ ಜನರು ಅರೇಬಿಯಾದ ಮರುಭೂಮಿಯ ಈ ಅನಾಗರಿಕ ಮತ್ತು ಯೋಧ ಗೋತ್ರಗಳು ಇಸ್ಲಾಮಿನ ಉಗ್ರ ಶತ್ರುಗಳೆಂದು ಸ್ಪಷ್ಟವಾಗಿ ತೋರಿಸುತ್ತದೆ ಮತ್ತು ಅವಕಾಶ ಲಭಿಸಿದರೆ ಮುಸ್ಲಿಮರನ್ನು ಸರ್ವನಾಶ ಮಾಡಲು ಸಿದ್ಧವಾಗಿದ್ದರು. ಆ ಕಾಲದ ಮುಸಲ್ಮಾನರ ಸ್ಥಿತಿ ಹೇಗಿತ್ತು ಎಂದು ಸ್ವಲ್ಪ ಯೋಚಿಸಿ ನೋಡಿ, ದಿನಗಳು ಹೇಗೆ ಕಳೆಯುತ್ತಿದ್ದರು. ಇಸ್ಲಾಮಿನ ವೈರತ್ವ ಮತ್ತು ಬದ್ರ್ ಕದನದ ಪ್ರತೀಕಾರ

ಮನೋಭಾವದಿಂದ ಕುರುಡರಾಗಿದ್ದ ಮಕ್ಕಾದ ಖುರೈಷಿಗಳು ಒಂದು ಕಡೆ ಇದ್ದರು. ಅವರು ಕಾಬಾ ಭವನದ ಪರದೆಗಳನ್ನು ಅಪ್ಪಿಕೊಂಡು ಮುಸ್ಲಿಮರನ್ನು ಸರ್ವಶನಾಶ ಮಾಡುವವರೆಗೂ ನೆಮ್ಮದಿಯಾಗಿ ಕೂರುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ಮತ್ತೊಂದೆಡೆ, ಈ ಅರೇಬಿಯಾದ ಮರುಭೂಮಿಯ ರಕ್ತಪಿಪಾಸು ಪ್ರಾಣಿಗಳಾಗಿದ್ದು, ಖುರೇಷಿಗಳ ಪ್ರಚೋದನೆಯಿಂದ ಮತ್ತು ಮುಸ್ಲಿಮರ ರಕ್ತದ ದಾಹದಿಂದ ಇಸ್ಲಾಮಿನ ದ್ವೇಷದಿಂದ ತಾಳ್ಮೆ ಕಳೆದುಕೊಂಡಿದ್ದರು. ಹೀಗಾಗಿ, ಬದ್ರ್ ನಂತರ ಕೆಲವೇ ತಿಂಗಳುಗಳಲ್ಲಿ, ಹಝ್ರತ್ ಪೈಗಂಬರ್(ಸ) ಸ್ವತಃ ಈ ಅನಾಗರಿಕ ಅರಬ್ ಗೋತ್ರಗಳ ರಕ್ತಸಿಕ್ತ ಉದ್ದೇಶಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಎಷ್ಟು ಬಾರಿ ಪ್ರಯಾಣಿಸಬೇಕಾಯಿತು ಎಂಬುದನ್ನು ನೋಡಿ. ಸರ್ ವಿಲಿಯಮ್ ಮ್ಯೂರ್ ವಿವರಿಸಿದಂತೆ. ಈ ದಿನಗಳು ತುಂಬಾ ಬೇಸಿಗೆಯ ದಿನಗಳಾಗಿರುತ್ತಿದ್ದವು ಅದು ಅರೇಬಿಯಾದ ಮರುಭೂಮಿಯ ಬೇಸಿಗೆ ಯಾಗಿತ್ತು.

ದೇವರ ವಿಶೇಷ ನೆರವು ಒಳಗೊಂಡಿರದಿದ್ದರೆ ಮತ್ತು ಹಝ್ರತ್ ಪೈಗಂಬರ್(ಸ)(ಸ) ಅವರ ಎಚ್ಚರಿಕೆಯ ಮನಸ್ಸು ಮುಸ್ಲಿಮರನ್ನು ಎಲ್ಲಾ ಸಮಯದಲ್ಲೂ ಎಚ್ಚರವಾಗಿ ಮತ್ತು ಎಚ್ಚರವಾಗಿರಿಸದಿದ್ದರೆ ಮತ್ತು ಹಝ್ರತ್ ಪೈಗಂಬರ್(ಸ) ಅವರು ಶತ್ರುಗಳ ಒಕ್ಕೂಟಗಳು ದಾಳಿ ಮಾಡುವ ಮೊದಲು ಅವರನ್ನು ಚದುರಿಸಲು ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಆ ದಿನಗಳಲ್ಲಿ ಮುಸ್ಲಿಮರ ಸರ್ವನಾಶವಾಗುವುದರಲ್ಲಿ ಯಆವುದೇ ಸಂದೇಹವಿರಲಿಲ್ಲ. ಮತ್ತು ಇವು ಕೇವಲ ಬಾಹ್ಯ ಅಪಾಯಳಾಗಿದ್ದರು. ಮತ್ತು ಆಂತರಿಕ ಅಪಾಯುಗಳೂ ಏನು ಕಡಿಮೆ ಇರಲಿಲ್ಲ. ಮದೀನಾದಲ್ಲಿಯೇ ಮುಸ್ಲಿಮರೊಂದಿಗೆ ಬೆರೆತು ಕಪಟ ವಿಶ್ವಾಸಿಗಳು ವಾಸಿಸುತ್ತಿದ್ದರು ಮತ್ತು ಅವರನ್ನು (ಆಸ್ತೀನ್ ಕಾಸಾಮ್ಪ್) ಜೊತೆಗಿದ್ದು ಹಗೆಸಾಧಿಸುವವನು ಎಂದು ಕರೆಯುವುದು ಖಂಡಿತವಾಗಿಯೂ ಅತಿಶಯೋಕ್ತಿಯಲ್ಲ. ಅದರ ಹೊರತಾಗಿ, ದೇಶದ್ರೋಹಿಗಳು ಮತ್ತು ರಹಸ್ಯ ಪಿತೂರಿಗಳಿಗೆ ವ್ಯಸನಿಯಾಗಿದ್ದ ಯಹೂದಿ ಜನರಿದ್ದರು, ಅವರ ದ್ವೇಷದ ಆಳ ಮತ್ತು ಅಗಲವು ಅತಿರೇಕವನ್ನು ತಲುಪಿತ್ತು. ಅಲ್ಲಾಹ್! ಅಲ್ಲಾಹ್! ಇದು ಆ ಆರಂಭಿಕ ಮುಸ್ಲಿಮರಿಗೆ ಸಂಕಟದ ದಿನಗಳಗಿದ್ದವು!! ಅವರ ಮಾತಿನಲ್ಲೇ ಕೇಳಿ. ಉಬೈ ಬಿನ್ ಕಅಬ್.... ವರದಿ ಮಾಡುತ್ತಾರೆ: “ಆ ಕಾಲದಲ್ಲಿ ಸಹಾಬರವರ ಪರಿಸ್ಥಿತಿಗಳು ಹೇಗಿದ್ದವು ಎಂದರೆ ಅವರ ಮೇಲೆ ಯಾರು ಅಕ್ರಮಣ ಮಾಡದಿರಲಿ ಎಂಬ ಭಯದಿಂದ ಅವರು ರಾತ್ರಿಯ ಸಮಯದಲ್ಲಿ ಆಯುಧಗಳನ್ನು ಧರಿಸಿ ಮಲಗುತ್ತಿದ್ದರು ಮತ್ತು ಹಗಲಿನ ಹೊತ್ತು ಸಹ ಆಯುಧಗಳನ್ನು ಧರಿಸಿ ಓಡಾಡುತ್ತಿದ್ದರು. ಮತ್ತು ಅವರು ಒಬ್ಬರಿಗೊಬ್ಬರು ಹೇಳುತ್ತಿದ್ದರು, ನಾವು ಶಾಂತಿ ಮತ್ತು ಭದ್ರತೆಯ ಜೀವನವನ್ನು ನಡೆಸುವವರೆಗೂ ನಾವು ಬದುಕಿದ್ದೇವೆಯೇ ಎಂದು ನೋಡೋಣ ಮತ್ತು ನಾವು ದೇವರನ್ನು ಹೊರತುಪಡಿಸಿ ಯಾರಿಗೂ ಹೆದರುವುದಿಲ್ಲ.”

ಈ ಮಾತುಗಳಲ್ಲಿ ಎಂತಹ ಸಂಕಟ ಮತ್ತು ಅಸಹಾಯಕತೆ ವ್ಯಕ್ತವಾಗಿದೆ ಮತ್ತು ಶಾಂತಿ ಮತ್ತು ನೆಮ್ಮದಿಯ ಜೀವನಕ್ಕಾಗಿ ಎಷ್ಟು ಹಂಬಲವಿದೆ. ಪ್ರತಿಯೊಬ್ಬ ನ್ಯಾಯಯುತ ಮನಸ್ಸಿನ ವ್ಯಕ್ತಿಯು ಅದನ್ನು ಸ್ವತಃ ಅಂದಾಜು ಮಾಡಬಹುದು.” (ಸೀರತ್ ಖಾತಮನ್ನಬಿಈನ್(ಸ), ಪುಟ 464–465) ಮತ್ತು ಇಂತಹ ಪರಿಸ್ಥಿತಿಯು ಇಂದಿಗೂ ಕೆಲವು ಸ್ಥಳಗಳಲ್ಲಿದೆ, ವಿಶೇಷವಾಗಿ ಪ್ಯಾಲೆಸ್ಟೀನಿಯಾದ ಪರಿಸ್ಥಿತಿಯಾಗಿದೆ.

ಮತ್ತೊಂದು ಝೈದ್ ಬಿನ್ ಹಾರಿಸರ ಕಾರ್ಯಾಚರಣೆಯಾಗಿದೆ. ಇದರ ವಿವರಣೆಯ ಬಗ್ಗೆ ಹೀಗೆ ಪ್ರಸ್ತಾಪ ಬರುತ್ತದೆ. ಬನೂ ಸುಲೈಮ್‌ನ ಹಿಮ್ಮೆಟ್ಟುವಿಕೆಯು ಬನೂ ಖೈನಖಾನ ಗಡಿಪಾರು, ಸುವೈಖ್ ಅಭಿಯಾನದಲ್ಲಿ ಅಬುಸುಫ್ಯಾನ್‌ನ ಪಲಾಯನ ಮತ್ತು ಬನೂ ಸಾಲಬಾದ ಹಿಮ್ಮೆಟ್ಟುವಿಕೆಗೆ ಕಾರಣವಾಯಿತು ಎಂದು ಬರೆಯಲಾಗಿದೆ. ಬನೂ ಗ಼ತ್‌ಫಾನ್‌ನ ಯುದ್ಧದಲ್ಲಿ ಬನೂ ಮುಹಾರಿಬ್‌ನ ಹಿಮ್ಮೆಟ್ಟುವಿಕೆ ಮತ್ತು ಈ ಸೈನಿಕ ಪ್ರಾಬಲ್ಯವು ಮದೀನಾದ ಉದಯೋನ್ಮುಖ ಶಕ್ತಿಯನ್ನು ಸೂಚಿಸುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ, ಬದ್ರ್ ಕದನದಲ್ಲಿ ವಿಶ್ವಾಸಿಗಳ ಯಶಸ್ಸು ಮತ್ತು ಮುಶ್ರಿಕೀನರ ಅವಮಾನಕರ ಸೋಲಿನಿಂದಾಗಿ, ಇಸ್ಲಾಂ ಧರ್ಮದ ಅನುಯಾಯಿಗಳು ಆರ್ಥಿಕ ತೊಂದರೆಗಳು ಮತ್ತು ನೋವುಗಳ ಬಗ್ಗೆ ತುಂಬಾ ಚಿಂತಿತರಾಗಿದ್ದರು ಏಕೆಂದರೆ ಮೆಕ್ಕಾದಿಂದ ಸಿರಿಯಾಕ್ಕೆ ಪ್ರಸಿದ್ಧ ಹೆದ್ದಾರಿಯು ಅಹ್ಮರ್ ಸಮುದ್ರದ ಮೂಲಕ ಹಾದುಹೋಗಿತ್ತು. ಮದೀನಾದ ಪಶ್ಚಿಮಕ್ಕೆ. ಮುಸ್ಲಿಮರು ಈ ಮಾರ್ಗದಲ್ಲಿ ಅಬು ಸುಫ್ಯಾನ್‌ನ ವ್ಯಾಪಾರ ತಂಡವನ್ನು ತಡೆಯಲು ಪ್ರಯತ್ನಿಸಿದ್ದರು. ಮದೀನದ ಸುತ್ತಮುತ್ತಲಿನ ಗೋತ್ರಗಳು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ರಾಜಿ ಮಾಡಿಕೊಂಡಿದ್ದರು. ಆದ್ದರಿಂದ, ಮಕ್ಕಾದ ಅವಿಶ್ವಾಸಿಗಳು ವ್ಯಾಪಾರಕ್ಕಾಗಿ ಈ ಮಾರ್ಗವನ್ನು ತೆಗೆದುಕೊಳ್ಳಲು ಯಾವುದೇ ರೀತಿಯಲ್ಲಿ ಸಿದ್ಧರಿರಲಿಲ್ಲ. ಇಸ್ಲಾಂ ಧರ್ಮದ ಜನರು ಮುಶ್ರಿಕೀನರ ಆರ್ಥಿಕ ದಿಗ್ಬಂಧನದಿಂದಾಗಿ, ಅವರು ತುಂಬಾ ಚಿಂತಿತರಾದರು ಮತ್ತು ಸಿರಿಯಾದ ಪ್ರಸಿದ್ಧ ಮಾರ್ಗವನ್ನು ತೊರೆದು ಹೊಸ ಮಾರ್ಗವನ್ನು ಹುಡುಕಲಾರಂಭಿಸಿದರು. ಒಂದು ದಿನ, ಸಫ್ವಾನ್ ಬಿನ್ ಉಮಯ್ಯ ಅವರು ಮಕ್ಕಾದ ಅವಿಶ್ವಾಸಿಗಳಿಗೆ ಹೇಳಿದರು, ಮುಹಮ್ಮದ್(ಸ) ಮತ್ತು ಅವರ ಸಹಾಬರವರು ನಮಗೆ ಜೀವನವನ್ನು ಕಷ್ಟಕರವಾಗಿಸಿದ್ದಾರೆ. ನಮ್ಮ ವಾಣಿಜ್ಯ ಕೇಂದ್ರಕ್ಕೆ ಹೋಗದಂತೆ ತಡೆದರು. ಈಗ ನಮಗೆ ಏನು ಮಾಡಬೇಕೆಂದು ಸೂಚಿಸುತ್ತಿಲ್ಲ. ಕಡಲತೀರದಿಂದ ಹಿಂದೆ ಸರಿಯಲು ಸಹ ಅವರು ಸಿದ್ಧ ಇಲ್ಲ. ಕರಾವಳಿಯ ಬಹುತೇಕ ಗೋತ್ರಗಳು ಸಹ ಅವರೊಂದಿಗೆ ರಾಜಿ ಮಾಡಿಕೊಂಡಿವೆ ಮತ್ತು ಅವರೊಂದಿಗೆ ವಿಲೀನಗೊಂಡಿವೆ. ಈಗ, ನಾವು ಎಲ್ಲಿಗೆ ಹೋಗಬೇಕು ಮತ್ತು ನಾವು ಏನು ಮಾಡಬೇಕು? ಇಲ್ಲೇ ಮಕ್ಕಾದಲ್ಲಿ ಉಳಿದರೆ ನಮ್ಮ ಇಲ್ಲಿರುವ ಸಂಪತ್ತನ್ನೂ ತಿನ್ನುತ್ತೇವೆ. ನಮ್ಮಲ್ಲಿರುವುದೆಲ್ಲವೂ ತಿನ್ನುತ್ತೇವೆ. ಅದರ ನಂತರ ನಮಗೆ ಬದುಕಲು ಏನೂ ಉಳಿಯುವುದಿಲ್ಲ. ವ್ಯಾಪಾರದ ಉದ್ದೇಶದಿಂದ ನಾವು ಬೇಸಿಗೆಯಲ್ಲಿ ಸಿರಿಯಾಕ್ಕೆ ಮತ್ತು ಚಳಿಗಾಲದಲ್ಲಿ ಅಬಿಸ್ಸಿನಿಯಾಕ್ಕೆ ಈ ಸರಕುಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಈಗ ಏನಾಗುತ್ತದೆ? ಸಫ್ವಾನ್ ಬಿನ್ ಉಮಯ್ಯ ಅವರಿಂದ ಇದನ್ನು ಕೇಳಿದ ನಂತರ ಎಲ್ಲರೂ ಚಿಂತಿತರಾಗಿದ್ದರು. ಅಸ್ವದ್ ಬಿನ್ ಮುತಾಲಿಬ್ ಅವರು ಕರಾವಳಿ ಮಾರ್ಗವನ್ನು ಬಿಟ್ಟು ಇರಾಕ್ ಕಡೆಯಿಂದ ಸಿರಿಯಾಕ್ಕೆ ಹೋಗಬಹುದು ಎಂದು ಸಲಹೆ ನೀಡಿದರು. ಸಫ್ವಾನ್ ಹೇಳಿದರು, "ನನಗೆ ಈ ದಾರಿ ತಿಳಿದಿಲ್ಲ." ಅಬು ಝುಮ್‌ಅ ಹೇಳಿದರು, ಈ ಮಾರ್ಗದ ಸಂಪೂರ್ಣ ಜ್ಞಾನವನ್ನು ಹೊಂದಿರುವ ನಾಯಕನ ಬಗ್ಗೆ ನಾನು ನಿಮಗೆ ಹೇಳುತ್ತೇನೆ. ಅವನು ಫುರಾತ್ ಬಿನ್ ಹಯ್ಯಾನ್ ಇಜ್ಲಿ ಎಂದು ಹೇಳಿದರು. ಅವನು ಈ ಮಾರ್ಗದ ಮೂಲಕ ಬರುತ್ತಾನೆ ಮತ್ತು ಹೋಗುತ್ತಾನೆ ಮತ್ತು ಅವನು ಈ ಮಾರ್ಗದ ಬಗ್ಗೆ ಸಂಪೂರ್ಣವಾಗಿ ಪರಿಚಿತರಾಗಿದ್ದಾನೆ. ಸಫ್ವಾನ್ ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಇದು ಉತ್ತಮವಾಗಿದೆ ಎಂದು ಹೇಳಿದರು. ನಾನು ಬಯಸಿದ್ದು ಇದೇ. ಫುರಾತ್‌ನನ್ನು ಕರೆಸಲಾಯಿತು. ಅವನು ಬಂದ ನಂತರ, ಸಫ್ವಾನ್ ನಾನು ವ್ಯಾಪಾರದ ಕಾರವಾನ್‌ನೊಂದಿಗೆ ಸಿರಿಯಾಕ್ಕೆ ಹೋಗಬೇಕೆಂದು ಬಯಸಿದ್ದೇನೆ ಆದರೆ ಮುಹಮ್ಮದ್ (ಸ.ಅ) ನಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಮಗೆ ತೊಂದರೆ ಕೊಟ್ಟಿದ್ದಾರೆ ಏಕೆಂದರೆ ನಮ್ಮ ಕಾರವಾನ್‌ಗಳು ಅವರ ಮೂಲಕ ಹಾದುಹೋಗುತ್ತವೆ. ನಾನು ಇರಾಖ್ ಮಾರ್ಗವಾಗಿ ಸಿರಿಯಾಕ್ಕೆ ಹೋಗಲು ಬಯಸುತ್ತೇನೆ ಎಂದು ಹೇಳಿದಾಗ. ಸರಿ ನಾನು ನಿಮ್ಮನ್ನು ಇರಾಖ್‌ನ ಮಾರ್ಗದಿಂದ ಮುಹಮ್ಮದ್ (ಸ) ಅವರ ಸಹಚರರು ತಿಳಿಯದಂತೆ ಕರೆದೊಯ್ಯುತ್ತೇನೆ ಎಂದು ಫುರಾತ್ ಹೇಳಿದನು. ಇದು ಬಂಜರು ಮತ್ತು ಜನವಸತಿ ಇಲ್ಲದ ಪ್ರದೇಶವಾಗಿದೆ. ಅದಕ್ಕೆ ಸಫ್ವಾನ್ ಹೇಳಿದರು, ನನಗೂ ಅದೇ ಬೇಕಾಗಿದೆ. ಅದರ ಅರಣ್ಯವು ನಮಗೆ ಹೆಚ್ಚು ತೊಂದರೆಗಳನ್ನು ಉಂಟುಮಾಡುವುದಿಲ್ಲ, ಏಕೆಂದರೆ ಈಗ ಚಳಿಗಾಲವಾಗಿದ್ದರಿಂದ ನಮಗೆ ದಾರಿಯಲ್ಲಿ ಸ್ವಲ್ಪ ನೀರಿನ ಅಗತ್ಯವಿರುತ್ತದೆ ಅದನ್ನು ನಾವು ಸಹಿಸಿಕೊಳ್ಳುತ್ತೇವೆ.

ಆದಾಗ್ಯೂ, ಪ್ರವಾಸಕ್ಕೆ ಸಿದ್ಧತೆ ಪ್ರಾರಂಭವಾಯಿತು. ತದನಂತರ, ಸಫ್ವಾನ್ ಬಿನ್ ಉಮಯ್ಯ ತಂಡದವರಿಗೆ ಸಿದ್ಧರಾಗಲು ಹೇಳಿದನು. ಅವನು ತನ್ನಲ್ಲಿದ್ದ ಇಡೀ ಠೇವಣಿ ತೆಗೆದುಕೊಂಡನು. ಬೆಳ್ಳಿ ಪಾತ್ರೆಗಳು, ಬೆಳ್ಳಿಯ ಗಟ್ಟಿಗಳು ಮತ್ತು ಇತರ ಪಾತ್ರೆಗಳನ್ನು ಸಹ ಅವರೊಂದಿಗೆ ತೆಗೆದುಕೊಂಡು ಹೋಗಲಾಯಿತು. ಅಬು ಝುಮ್‌ಅ ಸಫ್ವಾನ್‌ಗೆ ಮುನ್ನೂರು ಶೆಕೆಲ್‌ಗಳಷ್ಟು ಚಿನ್ನ ಮತ್ತು ಬೆಳ್ಳಿಯ ಗಟ್ಟಿಗಳನ್ನು ನೀಡಿದನು, ಇದರಿಂದ ಅವನು ಅವನಿಗಾಗಿ ಖರೀದಿಸಲು. ಒಂದು ಶೆಕೆಲ್ ಚಿನ್ನವು ಸರಿಸುಮಾರು ನಾಲ್ಕೂವರೆ ಗ್ರಾಂ, 4.37 ಗ್ರಾಂಗಳಿಗೆ ಸಮಾನವಾಗಿರುತ್ತದೆ. ಆದಾಗ್ಯೂ, ಇದು ಸಾಕಷ್ಟು ಇತ್ತು. ಮೂವತ್ತು ಪೌಂಡ್ ತೂಕದ ಬೆಳ್ಳಿಯ ಗಟ್ಟಿಗಳು ಮತ್ತು ಬೆಳ್ಳಿಯ ಪಾತ್ರೆಗಳು ಸೇರಿದಂತೆ ಸಫ್ವಾನ್ ಬಹಳಷ್ಟು ಸಂಪತ್ತಿನಿಂದ ಹೊರಬಂದನು ಎಂದು ವರದಿಯಲ್ಲಿ ಹೇಳಲಾಗುತ್ತದೆ. ಇದು ದಿರ್ಹಮ್ ಮೌಲ್ಯದ್ದಾಗಿತ್ತು. ಅಬು ಸುಫ್ಯಾನ್ ಬಿನ್ ಹರ್ಬ್ ಕೂಡ ಬಹಳಷ್ಟು ಬೆಳ್ಳಿಯೊಂದಿಗೆ ಹೊರಟುಹೋದನು ಮತ್ತು ಖುರೈಶ್‌ನ ಇತರ ಜನರು ಸಹ ತಮ್ಮ ಸ್ವಂತ ಖರೀದಿಗಳಿಗಾಗಿ ಆ ಗುಂಪಿನಲ್ಲಿ ಭಾಗವಹಿಸುವವರಿಗೆ ಚಿನ್ನ ಮತ್ತು ಬೆಳ್ಳಿಯನ್ನು ಒಪ್ಪಿಸಿದನು. ಸಫ್ವಾನ್ ಮತ್ತು ಅಬು ಸುಫ್ಯಾನ್ ಅವರಲ್ಲದೆ, ಅಬ್ದುಲ್ಲಾ ಬಿನ್ ಅಬಿ ರಬಿಯಾ ಅವರಂತಹ ಅನೇಕ ಜನರು ಈ ವ್ಯಾಪಾರ ಕಾರವಾನ್ ಜೊತೆಗಿದ್ದರು. ಹುವೈತಾಬ್ ಬಿನ್ ಅಬ್ದುಲ್ ಉಝ್ಝ ಇತ್ಯಾದಿ ಜನರಿದ್ದರು. ಹೀಗಾಗಿ, ಫುರಾತ್ ಬಿನ್ ಹಯ್ಯಾನ್‌ನ ನೇತೃತ್ವದಲ್ಲಿ, ಖುರೈಶ್‌ರ ಕಾರವಾನ್ ಇರಾಕ್ ಮಾರ್ಗವಾಗಿ ಸಿರಿಯಾಗೆ ಹೊರಟಿತು.

ಈ ಯುದ್ಧದ ಇತಿಹಾಸ ಮತ್ತು ಇತರ ಹೆಸರುಗಳಿಗೆ ಸಂಬಂಧಿಸಿದಂತೆ, ಈ ಯುದ್ಧವು ಜಮಾದಿ-ಉಲ್-ಆಖ್ರ್ ಮೂರು ಹಿಜ್ರಿಯಲ್ಲಿ ನಡೆಯಿತು ಎಂದು ಹೇಳಲಾಗುತ್ತದೆ. ಯುದ್ಧದ ಸ್ಥಳವನ್ನು ಅವಲಂಬಿಸಿ, ಈ ಕಾರ್ಯಾಚರಣೆಯನ್ನು ಖರ್ದಾ ಯುದ್ಧ ಎಂದೂ ಕರೆಯಲಾಗುತ್ತದೆ. ನಜ್ದ್‌ನ ನೀರಿನಲ್ಲಿ ಖರ್ದಾ ಕೂಡ ಒಂದಾಗಿದೆ. ಮಕ್ಕಾದ

ಖುರೈಷಿಗಳು ತಮ್ಮ ಕಡೆಯಿಂದ ಮೇಲೆ ತಿಳಿಸಿದ ಮಾರ್ಗವನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸಿಕೊಂಡರು. ಈ ಸುದ್ದಿ ಮದೀನಾಗೆ ಯಾವುದೇ ರೀತಿಯಲ್ಲಿ ತಲುಪದಂತೆ ತಡೆಯುವುದು ಅವರ ಪ್ರಯತ್ನವಾಗಿತ್ತು, ಇಲ್ಲದಿದ್ದರೆ ನಾವು ಈ ಮಾರ್ಗದಲ್ಲಿ ಹೋಗುವುದು ಅಸಾಧ್ಯ, ಆದರೆ ಸರ್ವಶಕ್ತನಾದ ಅಲ್ಲಾಹನ ಚಿತ್ತ ಬೇರೆಯೇ ಆಗಿತ್ತು. ಈ ಸುದ್ದಿಯನ್ನು ಮಕ್ಕಾದ ಜನರಿಂದ ಮುಚ್ಚಿಡಲಾಗಲಿಲ್ಲ. ಆದ್ದರಿಂದ ನುಐಮ್ ಬಿನ್ ಮಸ್‌ಊದ್ ಅಶ್ಜಾಯಿಗೆ ಈ ಯೋಜನೆಯ ಬಗ್ಗೆ ತಿಳಿಯಿತು. ಆ ದಿನಗಳಲ್ಲಿ ಅವರು ಕೆಲವು ಕೆಲಸದ ನಿಮಿತ್ತ ಮದೀನಾಗೆ ಹೋಗಬೇಕಾಗಿತ್ತು. ಇವರು ಇನ್ನೂ ಅಧರ್ಮೀಯರು ಮತ್ತು ಬಹುದೇವತಾವಾದಿಗಳಾಗಿದ್ದರು. ಅವರು ಮದೀನಾದಲ್ಲಿ ಬನೂ ನಝೀರ್‌ನ ಮುಖ್ಯಸ್ಥ ಕಿನಾನಾ ಬಿನ್ ಅಬಿ ಹುಖೈಖ್‌ನ ಬಳಿ ತಂಗಿದ್ದರು. ಅವನು ಅವರನ್ನು ಮದ್ಯಪಾನವನು ಕುಡಿಸಿದನು. ಸಲೀತ್ ಬಿನ್ ಸುಹ್ಮಾನ್ ಓರ್ವ ಸಹಾಬಿಯಾಗಿದ್ದರು ಅವರು ಆಗ್ಗಾಗ ಬನೂ ನಝೀರ್ ಅವರನ್ನು ಭೇಟಿ ಮಾಡುತ್ತಿದ್ದರು. ಅಷ್ಟರಲ್ಲಿ ಕಿನಾನಾ ಬಿನ್ ಅಬಿ ಹುಕೈಕ್ ಮತ್ತು ನುಐಮ್ ಕುಳಿತಿದ್ದ ಸ್ಥಳಕ್ಕೆ ಅವರೂ ಬಂದರು. ನುಐಮ್ ಕುಡಿದಿದ್ದರು. ಹಾಗಾಗಿ ತನ್ನನ್ನು ತಾನು ನಿಯಂತ್ರಿಸಿಕೊಳ್ಳಲಾಗದೆ ಕುಡಿದ ಮತ್ತಿನಲ್ಲಿ ರಹಸ್ಯವನ್ನು ಬಹಿರಂಗಪಡಿಸಿದನು. ಸಫ್ವಾನ್ ಬಿನ್ ಉಮಯ್ಯ ಅವರ ಮೇಲ್ವಿಚಾರಣೆಯಲ್ಲಿ ಇರಾಕ್ ಮೂಲಕ ಸಿರಿಯಾಕ್ಕೆ ಹೋಗುವ ವ್ಯಾಪಾರ ತಂಡದ ಬಗ್ಗೆ ಅವರು ಎಲ್ಲವನ್ನೂ ಹೇಳಿದರು. ಇದನ್ನು ಕೇಳಿದ ಸಲೀತ್ ಬಿನ್ ನುಮಾನ್ ಹೊರಗೆ ಹೋಗಿ ಹಝ್ರತ್ ಪೈಗಂಬರ್(ಸ) ಅವರಿಗೆ ಈ ಬಗ್ಗೆ ತಿಳಿಸಿದರು. ಹಝ್ರತ್ ಪೈಗಂಬರ್(ಸ)ರು ಈ ಮಾಹಿತಿಯನ್ನು ಸ್ವೀಕರಿಸಿದ ತಕ್ಷಣ, ಅವರು ತಕ್ಷಣ ಸಿದ್ಧತೆಗಳನ್ನು ಪ್ರಾರಂಭಿಸಿದರು ಮತ್ತು ನೂರು ಕುದುರೆ ಸವಾರರ ಸೈನ್ಯವನ್ನು ಕಳುಹಿಸಿದರು. ಇದರ ನೇತೃತ್ವ ಹಝ್ರತ್ ಝೈದ್ ಬಿನ್ ಹಾರಿಸಾ ಅವರಿಗೆ ವಹಿಸಲಾಯಿತು.

ಇಸ್ಲಾಮಿಕ್ ಸೈನ್ಯವನ್ನು ಮುನ್ನಡೆಸಲು ಹಝ್ರತ್ ಝೈದ್ ಬಿನ್ ಹಾರಿಸಾ(ರ) ರವರಿಗೆ ಇದೇ ಮೊದಲ ಬಾರಿಗೆ ನಿಯೋಜಿಸಲಾಯಿತು ಮತ್ತು ಅವರು ಈ ಅಭಿಯಾನದಲ್ಲಿ ಯಶಸ್ವಿಯಾದರು.

ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಝೈದ್ ಬಿನ್ ಹಾರಿಸಾ(ರ) ಅವರನ್ನು ನೂರು ಕುದುರೆ ಸವಾರರೊಂದಿಗೆ ಕಳುಹಿಸಿದರು. ಅವರತ್ತ ಸಾಗಿ ಬೆಂಗಾವಲು ಪಡೆಯನ್ನು ಪಡೆದುದುಕೊಂಡರು. ಆ ವ್ಯಾಪಾರ ತಂಡದ ನಾಯಕರು ಕಾಡಿಗೆ ಓಡಿಹೋದರು. ಸಹಾಬಿಗಳು ಒಬ್ಬರು ಅಥವಾ ಇಬ್ಬರನ್ನು ಸೆರೆಯಾಳುಗಳಾಗಿ ತೆಗೆದುಕೊಂಡು ವ್ಯಾಪಾರ ತಂಡದ ಸಾಮಾನುಗಳೊಂದಿಗೆ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದರು. ಅವರು (ಸ) ಅದನ್ನು ಐದು ಭಾಗಗಳಾಗಿ ವಿಂಗಡಿಸಿದರು ಮತ್ತು ಆಗಿನ ಖುಮ್ಸ್‌ಗಳ ಮೌಲ್ಯವು ಇಪ್ಪತ್ತು ಸಾವಿರ ದಿರ್ಹಮ್ಗಳ ಮೌಲ್ಯಕ್ಕೆ ಸಮಾನವಾಗಿತ್ತು. ಉಳಿದ ಸಂಪತ್ತನ್ನು ಸಿರಿಯಾದ ಜನರ ನಡುವೆ ಹಂಚಲಾಯಿತು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಸಂಪುಟ-6, ಪುಟಗಳು 395-398, ಮಕ್ತಬ ದಾರುಲ್ ಮಾರಿಫ್ ಲಾಹೋರ್) (ಕಿತಾಬುಲ್-ಮುಘಾಜಿ ಲಿಲ್‌ವಾಕಿದಿ, ಸಂಪುಟ-1, ಪುಟ-198, ಮಕ್ತಬಾ ಅಲಮ್ ಅಲ್ ಕುತುಬ್) (ಫರ್ಹಂಗ್ ಸೀರತ್, ಪುಟ-233, ಝುವಾರ ಅಕಾಡಮಿ, ಕರಾಚಿ 2003)

ಇನ್ನೊಂದು ವರದಿಯಲ್ಲಿ, ಹಝ್ರತ್ ಝೈದ್(ರ)ರವರು ಬಹಳ ಬೇಗನೆ ದಾರಿ ಮಾಡಿಕೊಟ್ಟರು ಮತ್ತು ಖುರೈಷಿಗಳ ವ್ಯಾಪಾರ ತಂಡವನ್ನು ಕರ್ದಾ ಎಂಬ ಚಿಲುಮೆಯ ಬಳಿ ತಂಗಲು ಇಳಿಯುತ್ತಿರುವಾಗ ಅವರನ್ನು ಹಿಡಿದು ಹಠಾತ್ತನೆ ದಾಳಿ ಮಾಡಿ ಇಡೀ ವ್ಯಾಪಾರ ತಂಡವನ್ನು ವಶಪಡಿಸಿಕೊಂಡರು. ಸಫ್ವಾನ್ ಬಿನ್ ಉಮಯ್ಯ ಮತ್ತು ಇತರರಿಗೆ ಪಲಾಯನ ಮಾಡುವುದನ್ನು ಬಿಟ್ಟು ಬೇರೆ ದಾರಿ ಕಾಣಲಿಲ್ಲ. ವ್ಯಾಪಾರ ತಂಡದ ನಾಯಕ ಫುರಾತ್ ಬಿನ್ ಹಯ್ಯನನ್ನು ಮುಸ್ಲಿಮರು ಸೆರೆಹಿಡಿದರು ಮತ್ತು ಇನ್ನೂ ಇಬ್ಬರು ಪುರುಷರನ್ನು ಬಂಧಿಸಲಾಯಿತು ಎಂದು ಹೇಳಲಾಗುತ್ತದೆ. ವ್ಯಾಪಾರ ತಂಡಕ್ಕೆ ಸೇರಿದ ಒಂದು ಲಕ್ಷ ದಿರ್ಹಮ್ ಮೌಲ್ಯದ ಅಪಾರ ಪ್ರಮಾಣದ ಹಡಗುಗಳು ಮತ್ತು ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಯಿತು. ಹಝ್ರತ್ ಪೈಗಂಬರ್(ಸ) ಅವರು ಖುಮ್ಸ್ ಅನ್ನು ತೆಗೆದು ಸೈನ್ಯದ ಜನರ ನಡುವೆ ಯುದ್ಧ ಸಂಪತ್ತನ್ನು ಹಂಚಿದರು. ಖುರೈಶ್‌ನ ನಾಯಕ, ಫುರಾತ್ ಬಿನ್ ಹಯ್ಯಾನ್ ಹಝ್ರತ್ ಪೈಗಂಬರ್(ಸ) ಅವರ ಅನುಗ್ರಹದಯಕ ಕೈಯಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. (ಅರ್ರಹೀಖ್ ಅಲ್‌ಮಖ್ತೂಮ್ ಅನುವಾದ, ಪು-337, ಮಕ್ತಬ ಸಲ್ಫಿಯ) ಇದರ ಸಂಬಂಧವಾಗಿ ಇನ್‌ಶಾಅಲ್ಲಾಹ್ ಮುಂದೆ ವಿವರಿಸಲಾಗುವುದು.

ಈ ವ್ಯಾಪಾರ ತಂಡಗಳನ್ನು ತಡೆಯಲು ಕಾರಣವೇನೆಂದರೆ, ಈ ವ್ಯಾಪಾರ ತಂಡಗಳಿಂದ ಲಭಿಸುವ ಲಾಭವನ್ನು ಮುಸ್ಲಿಮರ ವಿರುದ್ಧ ಯುದ್ಧ ನಡೆಸಲು ಉಪಯೋಗಿಸಲಾಗುತ್ತಿತ್ತು. ಇಂದಿನ ಕಾಲದಲ್ಲಿ ಅನೇಕ ದೇಶಗಳ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಲಾಗುತ್ತವೆ. ಆ ತಂಡಗಳನ್ನು ತಡೆಯುವುದು ಸಹ ಅದೇ ರೀತಿಯ ಒಂದು ಕ್ರಮವಾಗಿತ್ತು. ಇಂದಿನ ಕಾಲದಲ್ಲಿ ಕೆಲವೊಮ್ಮೆ ಈ ದೇಶಗಳು ಅಕ್ರಮವಾಗಿಯೂ ನಿರ್ಬಂಧ ಹೇರುತ್ತಾರೆ. ಹೀಗಿರುವಾಗ ಅಂಥವರು ಇಸ್ಲಾಮಿನ ಮೇಲೆ ಹೇಗೆ ಆಕ್ಷೇಪ ಎತ್ತಲು ಸಾಧ್ಯ?

ಈಗ ನಾನು ಪೆಲಸ್ತೀನಿಗಾಗಿ ದುಆ ಮಾಡಲು ಪುನಃ ಮನವಿ ಮಾಡುತ್ತೇನೆ. ಈಗ ಕನಿಷ್ಠ ಪಕ್ಷ ಕೆಲವು ಜನರು ಭಯಪಡುತ್ತಾ ಈ ದೌರ್ಜನ್ಯದ ವಿರುದ್ಧ ಮಾತನಾಡಲು ಆರಂಭಿಸಿದ್ದಾರೆ. ಈಗಂತು ಕೆಲವು ಯಹೂದಿಯರು ಕೂಡ ಈ ದೌರ್ಜನ್ಯದ ವಿರುದ್ಧ ದನಿಯೆತ್ತಿರುವರು. ನಮಗೂ ಕೂಡ ಕೆಟ್ಟ ಹೆಸರು ಏಕೆ ತರುತ್ತೀರಿ ಎಂದು ತನ್ನ ಸರ್ಕಾರದೊಂದಿಗೆ ಅವರು ಕೇಳಿರುವರು. ಹೇಗಿದ್ದರೂ ಸಣ್ಣ ಸಣ್ಣ ದನಿಗಳು ಏಳಲು ಆರಂಭಿಸಿವೆ. ಪೆಲಸ್ತೀನಿಯರಿಗೆ ನೆರವು ಲಭಿಸಲಿಕ್ಕಾಗಿ ದಿನಾಲೂ ನಾಲ್ಕು ಗಂಟೆಗಳ ಕಾಲ ಯುದ್ಧವನ್ನು ತಡೆಯಲಾಗುವುದು ಎಂದು ಹೇಳಲಾಗುತ್ತಿದೆ. ಇದರ ಪ್ರಕಾರ ಎಷ್ಟರ ಮಟ್ಟಿಗೆ ನಡೆಯುವರು ಎಂದೂ ಉಳಿದ 20 ಗಂಟೆಗಳಲ್ಲಿ ಎಷ್ಟು ಬಾಂಬ್‌ಗಳನ್ನು ವರ್ಷಿಸುವರು ಎಂದೂ ಅಲ್ಲಾಹನೇ ಬಲ್ಲನು.

ಹೆಚ್ಚಿನ ದೊಡ್ಡ ಸರ್ಕಾರಗಳು ಮತ್ತು ರಾಜಕರಣಿಗಳು ಕೂಡ ಪೆಲಸ್ತೀನಿಯರ ಜೀವಕ್ಕೆ ಯಾವುದೇ ಬೆಲೆ ನೀಡುತ್ತಿಲ್ಲ. ಅವರಿಗೆ ಅವರದೇ ಸ್ವಾರ್ಥ ಲಾಭಗಳು ಇವೆ. ಅಲ್ಲಾಹನು ಒಂದು ಕಾಲಾವಧಿ ತನಕವೇ ಕಾಲಾವಕಾಶ ನೀಡುತ್ತಾನೆ. ಅಲ್ಲದೇ ಇಹಲೋಕ ಮಾತ್ರವಲ್ಲ, ಪರಲೋಕವೂ ಇದೆ. ಈ ಲೋಕದಲ್ಲೂ ಹಿಡಿಗೂಡಲ್ಪಡಬಹುದು. ಪರಲೋಕದಲ್ಲಿ ಅವರು ಖಂಡಿತ ಹಿಡಿಗೂಡಲ್ಪಡುವವರು. ಹೇಗಿದ್ದರೂ ನಾವು ಪೀಡಿತ ಪೆಲಸ್ತೀನಿಯರಿಗಾಗಿ ದುಆ ಮಾಡಬೇಕು. ಅಲ್ಲಾಹನು ಅವರನ್ನು ಈ ದೌರ್ಜನ್ಯಗಳಿಂದ ಮುಕ್ತಿ ನೀಡಲಿ. ಆಮೀನ್.

ಈಗ ನಮಾಝ್‌ನ ನಂತರ ಎರಡು ಜನಾಝ಼ ಗ್ಞಾಇಬ್ ನಿರ್ವಹಿಸಲಾಗುವುದು.

ಮೊದಲನೆಯದ್ದು ಹಮೀದುರ್ರಹ್ಮಾನ್ ಖ಼ಾನ್ ಸಾಹಿಬ್‌ರ ಪತ್ನಿಯಾದ ಮನ್ಸೂರ ಬಾಸಿಮ ಸಾಹಿಬರದ್ದಾಗಿದೆ. ಕಳೆದ ದಿನಗಳಲ್ಲಿ ಅವರು ನಿಧನ ಹೊಂದಿದರು **ಇನ್ನಾ ಲಿಲ್ಲಾಹಿ ವ ಇನ್ನಾ ಅಲೈಹಿ ರಾಜಿಊನ್**. ಇವರು ಹಝ್ರ಼ತ್ ನವಾಬ್ ಅಬ್ದುಲ್ಲಾ ಖ಼ಾನ್ ಮತ್ತು ಹಝ್ರ಼ತ್ ಸಾಹಿಬ್‌ಝಾದಿ ಅಮತುಲ್ ಹಫೀಝ್ ಬೇಗಂ ಸಾಹಿಬ(ರ)ರ ಮೊಮ್ಮಗಳು ಹಾಗೂ ಹಝ್ರ಼ತ್ ಸಾಹಿಬ್‌ಝಾದ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್(ರ) ಮತ್ತು ಹಝ್ರ಼ತ್ ಬೂಝೈನಬ್ ಬೇಗಂ ಸಾಹಿಬ(ರ)ರ ಮಗಳ ಪುತ್ರಿಯೂ ಆಗಿದ್ದರು. ದಿವಂಗತರು ಮಿಯಾ ಅಬ್ಬಾಸ್ ಅಹ್ಮದ್ ಖ಼ಾನ್ ಸಾಹಿಬ್ ಮತ್ತು ಅಮತುಲ್ ಬಾರಿ ಬೇಗಂ ಸಾಹಿಬರ ಪುತ್ರಿಯೂ ಆಗಿದ್ದರು. ಅಲ್ಲಹನ ಅನುಗ್ರಹದಿಂದ ಮೂಸಿ ಆಗಿದ್ದರು. ಉತ್ತಮ ನೈತಿಕತೆ ಹೊಂದಿದ ಮಹಿಳೆ ಆಗಿದ್ದರು.

ಹಝ್ರ಼ತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ಅವರ ನಿಕಾಹಿನ ಸಂದರ್ಭದಲ್ಲಿ ಉಪದೇಶಿಸುತ್ತಾ ಹೀಗೆ ಹೇಳಿದ್ದರು: ನಿಕಾಹ್‌ದೊಂದಿಗೆ ಹೆಣ್ಣು ಮತ್ತು ಗಂಡಿನ ಮೇಲೆ ಹಿಂದೆಂದೂ ಹೊರಿಸದ ಹೊಸ ಜವಾಬ್ದಾರಿಗಳು ಹೊರಬೀಳುತ್ತವೆ. ಅದರಲ್ಲಿ ಮೊದಲನೆಯದಾಗಿ ಪತಿ-ಪತ್ನಿಯರ ಪರಸ್ಪರ ಜವಾಬ್ದಾರಿಗಳಿವೆ, ಅಂದರೆ ಪತಿ ಪತ್ನಿಗೆ ಮತ್ತು ಪತ್ನಿ ಪತಿಯ ಮೇಲೆ ಇರುತ್ತವೆ, ಮತ್ತು ಇಬ್ಬರೂ ತಮ್ಮ ಮಕ್ಕಳಿಗೆ ಸಂಬಂಧಿಸಿದ ಕೆಲವು ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಮಕ್ಕಳಿಗೆ ಸಂಬಂಧಿಸಿದಂತೆ, ಕೆಲವು ಜವಾಬ್ದಾರಿಗಳನ್ನು ಹಂಚಿಕೊಳ್ಳಲಾಗುತ್ತದೆ. ತಾಯಿ ಮಗುವಿಗೆ ಹಾಲುಣಿಸುತ್ತಾಳೆ ತಂದೆ ಉಣಿಸುವುದಿಲ್ಲ. ಮಗು ಅಲೆದಾಡದಂತೆ ಮನೆಯ ಹೊರಗೆ ತಂದೆ ನೋಡಿಕೊಳ್ಳುತ್ತಾನೆ. ಪತ್ನಿಯ ಜವಾಬ್ದಾರಿ ಮನೆಯ ಮಿತಿಯಲ್ಲಿರುತ್ತದೆ. ಆದರೆ, ಇಬ್ಬರೂ ತಮ್ಮ ಹಕ್ಕುಗಳನ್ನು ಪೂರೈಸಿದರೆ, ನಮ್ಮ ಮಕ್ಕಳನ್ನು ಇಂದಿಗೂ ಅನೇಕ ಅನಾಹುತಗಳಿಂದ ರಕ್ಷಿಸಬಹುದು. ನಂತರ ಅವರು ಈ ಸಂದರ್ಭದಲ್ಲಿ ನಾವು ಪಠಿಸುವ ಪವಿತ್ರ ಖುರ್‌ಆನ್‌ನ ಆಯತ್‌ಗಳು ಹೊಸ ಜವಾಬ್ದಾರಿಗಳತ್ತ ಗಮನ ಸೆಳೆಯುತ್ತಾ ಸರ್ವಶಕ್ತನಾದ ಅಲ್ಲಾಹನು ಹೇಳಿದನು: **ಯಾ ಅಯ್ಯುಹನ್ನಾಸು ತ್ತಖೂ ರಬ್ಬಕುಮ್** (ಅನ್ನಿಸಾಅ:2) 'ರಬ್ಬ್'ನ ತಖ್ವವನ್ನು ಕೈಗೊಳ್ಳಲು ಹೇಳಲಾಗಿದೆ. ಇದು ಸೂಚಿಸುವುದೇನೆಂದರೆ, ಯಾವ ರೀತಿಯಲ್ಲಿ ಅಲ್ಲಾಹನು ನಿಮ್ಮ ಪರಿಪಾಲನೆ ಮಾಡುತ್ತಾನೋ ಅದೇ ರೀತಿಯಲ್ಲಿ ಈಗ ನಿಮ್ಮ ಮೇಲೂ ಅಂತಹ ಹೊಣೆಗಾರಿಕೆ ಹಾಕಲಾಗುವುವು. ಅವುಗಳನ್ನು ನಿರ್ವಹಿಸಲಿಕ್ಕಾಗಿ ನೀವು ಕೂಡ ಪರಿಪಾಲನೆಯ ಗುಣದೊಂದಿಗೆ ದೇವಭಕ್ತಿಯನ್ನು ಕೈಗೊಳ್ಳಬೇಕು. ಎರಡನೆಯದಾಗಿ, ಈ ಸಂಬಂಧವು

ತುಂಬಾ ಸೂಕ್ಷ್ಮವಾಗಿದೆ. ಅಜಾಗರೂಕತೆಯ ಪರಿಣಾಮವಾಗಿ ಅನೇಕ ತಪ್ಪು ತಿಳುವಳಿಕೆಗಳು ಉಂಟಾಗಬಹುದು ಮತ್ತು ಇದನ್ನು ತಡೆಯಲು, ಸತ್ಯವನ್ನು ಹೇಳಲು ನಮಗೆ ಆಜ್ಞಾಪಿಸಲಾಗಿದೆ **ಖೂಲೂ ಖೌಲನ್ ಸದೀದಾ** (ಅಲ್-ಅಹ್ಜಾಬ್: 71) ಕೇವಲ ಸತ್ಯವು ಇಲ್ಲಿ ಕೆಲಸ ಮಾಡುವುದಿಲ್ಲ, ಬದಲಿಗೆ ಯಾವುದೇ ರೀತಿಯ ಸುಳ್ಳನ್ನು ಹೊಂದಿರದ ಪದಗಳು. ಈ ಮಾರ್ಗವನ್ನು ಅನುಸರಿಸಿದರೆ ನಿಮ್ಮ ನಡುವೆ ಯಾವುದೇ ತಪ್ಪು ತಿಳುವಳಿಕೆ, ಯಾವುದೇ ದ್ವೇಷ ಉಂಟಾಗುವುದಿಲ್ಲ. ಮತ್ತು ಮೂರನೆಯದು **ವಲ್‌ತನ್‌ಝುರ್ ನಫ್ಸುಮ್ಮಾ ಖದ್ದಮತ್‌ಲಿಗದ್** (ಅಲ್-ಹಶ್ರ್: 19) ನಿಮ್ಮ ಹಿರಿಯರು ನಿಮಗೆ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತರಬೇತಿ ನೀಡಿದ್ದಾರೆ ಮತ್ತು ನೀವು ನಿಮ್ಮ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಮಕ್ಕಳ ತರಬೇತಿಯನ್ನು ಮಾಡಬೇಕು. ಇದು ಪೋಷಕರು ಮಕ್ಕಳಿಗೆ ನೀಡುವ ತರಬೇತಿಗೆ ಸಂಬಂಧಿಸಿದ ಭವಿಷ್ಯವಾಗಿದೆ, ಇದು ಪ್ರತಿ ಪೀಳಿಗೆಯ ಪ್ರತ್ಯೇಕ ಭವಿಷ್ಯವಾಗಿದೆ. ಇದು ಒಂದೇ ರೀತಿಯ ಭವಿಷ್ಯವಲ್ಲ. ಏಕೆಂದರೆ ಜಗತ್ತು ಮತ್ತು ಪ್ರಪಂಚದ ಸಮಾಜವು ಚಲನೆಯಲ್ಲಿದೆ. ಈಗ ಕಾಲ ಬದಲಾಗಿದೆ, ಏನೋ ಆಗಿಬಿಟ್ಟಿದೆ. ನಾವು ಯಾವಾಗಲೂ ದಿಗಂತದಲ್ಲಿ ಘೋಷಿಸಲ್ಪಟ್ಟ ಮಹಾನ್ ಕ್ರಾಂತಿಯ ಚಿಹ್ನೆಗಳನ್ನು ನೋಡುತ್ತಿದ್ದೇವೆ. ಆದುದರಿಂದ ಇಂದಿನ ತಂದೆಯ ಜವಾಬ್ದಾರಿಯು ನಮ್ಮ ಜವಾಬ್ದಾರಿಗಿಂತ ಭಿನ್ನವಾಗಿದೆ, ಆದರೆ ತಮ್ಮ ಮಕ್ಕಳ ಜವಾಬ್ದಾರಿಯನ್ನು ಹೆಚ್ಚು ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕು, ಅಹ್ಮದಿಯರ ತರಬೇತಿ, ಇಡೀ ಪ್ರಪಂಚಕ್ಕೆ ಅವಲಂಬಿತ ತರಬೇತಿಯ ಭಾರವು ಮುಂದಿನ ಪೀಳಿಗೆಗೆ ಹೊರೆಯಾಗಿದೆ, ಆದ್ದರಿಂದ ಪ್ರತಿ ಮುಂದಿನ ಪೀಳಿಗೆಯು ಅದನ್ನು ಹೊರಲು ಸಿದ್ಧರಾಗಿರಬೇಕು. ಅಲ್ಲಾಹನು ನಮಗೆ ಈ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅವುಗಳ ಮೇಲೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ನೀಡುತ್ತಾನೆ ಎಂದು ಅವರು ಹೇಳಿದರು.

ಮತ್ತೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್)ರವರು ಹೇಳಿದರು: ಈಗ ನಿಕಾಹ್‌ದ ಘೋಷಣೆಗಾಗಿ ನಾನು ನಿಂತಿರುವುದು ನಮ್ಮ ಮುತ್ತಜ್ಜ ನವಾಬ್ ಅಬ್ದುಲ್ಲಾ ಖಾನ್ ಅವರ ಮೊಮ್ಮಗಳು ಮತ್ತು ಅಮತುಲ್ ಹಫೀಝ್ ಬೇಗಂ ಸಾಹಿಬಾ ಅವರ ಮೊಮ್ಮಗಳಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಾಲ್ಕನೇ ಪೀಳಿಗೆಯು ಪ್ರಾರಂಭವಾಗಿದೆ ಎಂದು ಅವರು ಹೇಳಿದರು. ಇವರು ಹಝ್ರತ್ ಮಿರ್ಝಾ ಷರೀಫ್ ಅಹ್ಮದ್ ಸಾಹಿಬ್ ಅವರ ಮೊಮ್ಮಗಳಾಗಿದ್ದರು. ಅವರು ಈ ಇನ್ನೊಂದು ಮಾರ್ಗದ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಂದ ಸಂಬಂಧ ಹೊಂದಿದ್ದಾರೆ ಎಂದು ಹೇಳಿದರು. ಜವಾಬ್ದಾರಿಗಳು ಎರಡು ಪಟ್ಟು ಹೆಚ್ಚಾಗಿವೆ. ಜವಾಬ್ದಾರಿಗಳು ಎರಡು ಪಟ್ಟಾದರೆ, ನಮಗೆ ಶುಭವಾರ್ತೆಗಳು ಎರಡು ಒಟ್ಟಾದರೆ ಎಚ್ಚರಿಕೆಯೂ ಎರಡು ಪಟ್ಟಾಗಿರುತ್ತದೆ. ತದನಂತರ ಅವರು ಕುಟುಂಬದ ಮಕ್ಕಳಿಗೆ ಮತ್ತು ಹಿರಿಯರಿಗೆ ತಮ್ಮ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳಬೇಕು ಎಂದು ವಿವರಿಸಿದರು ಏಕೆಂದರೆ ಎರಡು ಪಟ್ಟು ಜವಾಬ್ದಾರಿಗಳನ್ನು ಈಡೇರಿಸುವುದಿಲ್ಲ ಎಂದಾದರೆ ನೀವು ಎರಟು ಪಟ್ಟು ಎಚ್ಚರಿಕೆಗಳನ್ನು ಸಹ ನೋಡಬೇಕಾಗುತ್ತದೆ. ಸರ್ವಶಕ್ತನಾದ ಅಲ್ಲಾಹನು ಕುಟುಂಬದ ಹಿರಿಯರಿಗೆ ಮತ್ತು ಮಕ್ಕಳಿಗೆ ಇದನ್ನು ಅರ್ಥಮಾಡಿಕೊಳ್ಳಲು ಸೌಭಾಗ್ಯ ನೀಡಲಿ.

ನಂತರ ಅವರು(ರಹ್) ಹೇಳಿದರು, ಒಬ್ಬ ಹುಡುಗ ಅಥವಾ ಹುಡುಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಸಂಬಂಧ ಹೊಂದಿರುವ ನಿಕಾಹ್‌ವನ್ನು ನಾನು ಘೋಷಿಸಿದಾಗ, ಸಂಬಂಧದ ವಿಷಯದಲ್ಲಿ, ನಾನು ಆತಂಕವನ್ನು ಅನುಭವಿಸುತ್ತೇನೆ ಮತ್ತು ಸರ್ವಶಕ್ತನಾದ ಅಲ್ಲಾಹನು ಅವರನ್ನು ಗುರುತಿಸಲು ಅವರಿಗೆ ಸಹಾಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಒಬ್ಬ ಸೇವಕನ ವಿಷಯದಲ್ಲಿ ಅವರು ಇತರರಿಗಿಂತ ಭಿನ್ನರಾಗಿದ್ದಾರೆ ಮತ್ತು ಅವರು ತಮ್ಮ ಜೀವನವನ್ನು ಈ ಜಗತ್ತಿನಲ್ಲಿ ಹೆಚ್ಚಿನ ಸೇವಕರಾಗಿ ಕಳೆಯಬೇಕು. (ಖುತ್‌ಬಾತೆ ನಾಸಿರ್, ಸಂಪುಟ-10, ಪುಟ-710-713, ಖುತ್‌ಬ ನಿಕಾಹ್ 05-10-1981)

ಆದಾಗ್ಯೂ, ಇದು ಸಲಹೆಯ ಮಾತುಗಳಾಗಿದ್ದವು, ಆದ್ದರಿಂದ ನಾನು ಅವುಗಳನ್ನು ವಿವರಿಸಿದೆ. ಅಝೀಝಾ ಬಾಸ್ಮಾ ಮನ್ಸೂರಾ ಅವರ ವೈಯಕ್ತಿಕ ಜೀವನದ ಬಗ್ಗೆ ಅವರ ಪುತ್ರಿ ರಾಬಿಯಾ ಅವರು ಬರೆಯುತ್ತಾರೆ: ಬಾಲ್ಯದಲ್ಲಿಯೇ ಅಲ್ಲಾಹನೊಂದಿಗೆ ನಮಗೆ ಪರಿಚಯ ಮಾಡಿಸಿದರು. ತಮ್ಮ ಅದೃಷ್ಟಕ್ಕಾಗಿ ದುವಾಗೆ ಒತ್ತು ನೀಡುತ್ತಿದ್ದರು. ಅವರು ಆಗಾಗ್ಗೆ ಹೀಗೆ ಹೇಳುತ್ತಿದ್ದರು: ನೀವು ಸರ್ವಶಖ್ತನಾದ ಅಲ್ಲಾಹನು ನಿಮ್ಮನ್ನು ಒಳ್ಳೆಯ ಜನರೊಂದಿಗೆ ಸಂಪರ್ಕಿಸಲಿ ಎಂದು ದುಆ ಮಾಡುತ್ತಾ ಇರಿ. ಮತ್ತು ನಾವು ಬೆಳೆದುಬಂದಾಗ ನಮಗೆ ಈ ಪ್ರಾರ್ಥನೆಯ ಅರ್ಥವನ್ನು ಅರ್ಥವಾಯಿತು, ನಾವು ಚಿಕ್ಕವರಾಗಿದ್ದಾಗ ನಮಗೆ ಅರ್ಥವಾಗುತ್ತಿರಲಿಲ್ಲ. ನಮ್ಮ ತಾಯಿಗೆ ಜನರು ತುಂಬಾ ಇಷ್ಟವಾಗಿದ್ದರು. ಅವರು ತನ್ನ ಆತ್ಮವನ್ನು ತ್ಯಾಗ ಮಾಡುವ ಮೂಲಕ ಜನರನ್ನು ನೋಡಿಕೊಂಡಳು ಮತ್ತು ಇದು ಸತ್ಯವೂ ಆಗಿದೆ. ಬಾಹ್ಯವಾಗಿ, ಜನರಿಗೆ ಅವರು ತಮ್ಮ ಮೇಲೆ ಖರ್ಚು ಮಾಡುತ್ತಿದದಾರೆ ಎಂದು ಭಾಸವಾಗುತ್ತದೆ ಅದರೆ ಇಲ್ಲ, ಅವರು ತಮ್ಮನ್ನು ತ್ಯಾಗ ಮಾಡುತ್ತಾರೆ ಮತ್ತು ಇತರರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಉದಾಹರಣೆಗೆ, ಅವರು ಇಲ್ಲಿ ಜಲ್ಸಾಗೆ ಲಂಡನ್‌ಗೆ ಬಂದರೆ, ಅವರು ಬಡವರಿಗೆ ಉಡುಗೊರೆಗಳನ್ನು ತರುತ್ತಿದ್ದರು. ತಮಗಾಗಿ ಏನನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಅವರು ಓರ್ವ ಹುಡುಗಿಯನ್ನು ಬೆಳೆಸಿ ಅವಳನ್ನು ಚೆನ್ನಾಗಿ ಓದಿಸಿದಳು ನಂತರ ಅವಳನ್ನು ಮದುವೆಯನ್ನು ಮಾಡಿಸಿದರು. ಇದಲ್ಲದೆ, ಅನೇಕ ಹುಡುಗಿಯರನ್ನು ಮದುವೆ ಮಾಡಿಸಿದರು. ಅಲ್ಲದೇ ಮನೆಗೂ ಜನ ಬಂದು ಹೋಗುತ್ತಿದ್ದರು. ನೆರೆಹೊರೆಯವರ ಮನೆಯವರಿಗೂ ಊಟ ಇತ್ಯಾದಿಗಳನ್ನು ಕಳುಹಿಸುತ್ತಿದ್ದರು. ಒಂದು ಲಂಗರ್ ಖಾನ ಇದ್ದಂತೆ ಮನೆ ಇತ್ತು, ಅಂದರೆ ಹೊರಗೆ ಬೀದಿ ಗುಡಿಸುವವರೂ ಇರುತ್ತಿದ್ದರು, ಅವರೂ ಸಹ ಊಟದ ಸಮಯದಲ್ಲಿ ಅವರ ಬಳಿ ಬಂದು ಊಟ ಮಾಡುತ್ತಿದ್ದರು. ಹಲವರಿಗೆ ಸ್ಟೈಫಂಡ್ ನೀಡಿದ್ದರು. ತಮಗಾಗಿ ಏನನ್ನಾದರೂ ಸಂಗ್ರಹಿಸಿಡಲು ಅವರಿಗೆ ಹೇಳಿದರೆ ನನಗೆ ನಾಳೆಯ ಬಗ್ಗೆ ಚಂತೆ ಇಲ್ಲ ನಾನು ನಾಳೆಯ ಬಗ್ಗೆ ಯೋಚಿಸುದಿಲ್ಲ ಎಂದು ಉತ್ತರಿಸುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ನನ್ನ ಆರ್ಥಿಕ ಅಗತ್ಯಗಳ ಯಜಮಾನ ಆಗಿದ್ದಾನೆ. ವಖಿಫೆ ಝಿಂದಗಿಯವರನ್ನು ಬಹಳ ಗೌರವಿಸುತ್ತಿದ್ದರು ಮತ್ತು ಕಾಳಜಿ ವಹಿಸುತ್ತಿದ್ದರು. ವಾಖಿಫೀನೆ ಝಿಂದಗಿ ಬಂಧುಗಳೊಂದಿಗೆ ಸಂಬಂಧವಿಡುತ್ತಿದ್ದರು, ಅವರನ್ನು ಆಹ್ವಾನಿಸಿ, ವಖಿಫೀನೆ ಝಿಂದಗಿಯವರು ತಮ್ಮ ಜೀವನವನ್ನು ತ್ಯಾಗ ಮಾಡುತ್ತಾರೆ, ಅವರನ್ನು ನೋಡಿಕೊಳ್ಳಬೇಕು ಎಂದು ಹೇಳುತ್ತಿದ್ದರು. ಪ್ರತಿಯೊಂದು ಸಂಬಂಧವನ್ನು ಚೆನ್ನಾಗಿ ನಿಭಾಯಿಸುತ್ತಿದ್ದರು. ಇತರರು ನನಗೆ ಏನು ಮಾಡಿದ್ದಾರೆಂದು ನಾನು ಯೋಚಿಸುವುದಿಲ್ಲ ಎಂದು ಯಾವಾಗಲೂ ಹೇಳುತ್ತಿದ್ದರು. ತಪ್ಪು ಮತ್ತು ನಿಂದನೆ ಉಂಟಾದಾಗ, ಅವರು ಮೊದಲು ಕ್ಷಮೆ ಕೇಳಲು ಮುಂದಾಗತ್ತಿದ್ದರು. ಅವರು ನೌಕರನನ್ನು ಗದರಿಸಿದರೂ ಸಹ ಅವರು ಅವನಲ್ಲಿ ಕ್ಷಮೆಯಾಚಿಸುತ್ತಿದ್ದರು ಮತ್ತು ಬಹುಮಾನವನ್ನು ನೀಡುತ್ತಿದ್ದರು.

ಅವರ ಅಳಿಯ ಮಿರ್ಝಾ ತಖೀ ಉದ್ದೀನ್ ಹೇಳುತ್ತಾರೆ: ಬಹಳ ಚಿಕ್ಕ ವಯಸ್ಸಿನಲ್ಲೇ ಅವರು ವಸಿಯ್ಯತ್ ಮಾಡಿದ್ದಾರೆ. ನಾನೂ ನೋಡಿದೆ. ವಸಿಯ್ಯತ್ ಫಾರ್ಮ್ ನೋಡುವ ಮೊದಲು, ಅವರು ಸುಮಾರು ಹದಿನಾಲ್ಕನೇ ವಯಸ್ಸಿನಲ್ಲಿ ವಸಿಯ್ಯತ್ ಮಾಡಿರುವುದು ನನಗೆ ಆಶ್ಚರ್ಯವಾಯಿತು. ಅವರು ಬಾಲ್ಯದ ಕನಸನ್ನು ವಿವರಿಸಿದ್ದರು ಅವರು ಹೇಳುತ್ತಾರೆ: ನಾನು ಕನಸ್ಸಿನಲ್ಲಿ ಅಲ್ಲಾಹನ ಪಾದಗಳನ್ನು ಬಿಗಿಯಾಗಿ ಹಿಡಿದುಕೊಂಡು ಅಳುತ್ತಿರುವುದನ್ನು ನೋಡಿದರು ನಂತರ ಅವರಿಗೆ ಎಚ್ಚರವಾದಾಗ ಅವರು ನಿಜವಾಗಿಯೂ ಅಳುತ್ತಿದ್ದೇನೆ ಎಂದು ಹೇಳುತ್ತಿದ್ದರು. ಇಲ್ಲಿಯವರೆಗೆ ಅಲ್ಲಾಹನು ನನ್ನ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿದ್ದಾನೆ ಎಂದು ಅವರು ಹೇಳುತ್ತಾರೆ.

ಇಲ್ಲಿ ಅವರ ಪರಿಚಯಸ್ಥರಲ್ಲಿ ಒಬ್ಬರು ರೂಹಿ ಶಾಹ್ ಸಾಹಿಬಾ ಎಂಬವರಿದ್ದಾರೆ. ಅವರು ಹೇಳುತ್ತಾರೆ ಅವರು ಸ್ನೇಹ ಮಾಡಿದರೆ ಬಹಳ ಉತ್ತಮವಾಗಿ ಸ್ನೇಹದ ಹಖ್ಖನ್ನು ನಿಭಾಯಿಸುತ್ತಿದ್ದರು. ಅವರು ಬಹಳ ಕೃತಜ್ಞತೆಯ ಸ್ವಭಾವವನ್ನು ಹೊಂದಿದ್ದರು. ಅವರು ಅಲ್ಲಾಹನ ಸಂತೋಷದಿಂದ ತೃಪ್ತರಾಗಿದ್ದರು, ಅವನ ಅನುಗ್ರಹಗಳಿಗೆ ಕೃತಜ್ಞರಾಗಿದ್ದರು ಮತ್ತು ಜನರನ್ನು ದಯೆಯಿಂದ ನಡೆಸಿಕೊಳ್ಳುತ್ತಿದ್ದರು. ಅವರು ಬಹಳವಾಗಿ ಕೃತಜ್ಞತೆಗಳನ್ನು ಅರ್ಪಿಸುವವರಾಗಿದ್ದರು.

ಅವರ ಅತ್ತಿಗೆ ತಾಹಿರಾ ಫಾರೂಖ್ ಸಾಹಿಬಾ ಹೇಳುತ್ತಾರೆ: ಅವರು ನನಗೆ ಅತ್ತಿಗೆಯ ಬದಲು ಸ್ನೇಹಿತೆ ಮತ್ತು ತಂಗಿಯಾಗಿ ಇಟ್ಟುಕೊಂಡಿದ್ದರು. ಅವರು ನಿಸ್ವಾರ್ಥ ಪ್ರೀತಿಯ ವ್ಯಕ್ತಿಯಾಗಿದ್ದರು. ಅವರು ತನಗಾಗಿ ಇಷ್ಟಪಡುವದನ್ನು ಇತರರಿಗೂ ಇಷ್ಟಪಡುತ್ತಿದ್ದರು ಮತ್ತು ಎಂದಿಗೂ ತನ್ನ ಮನಸ್ಸಿನಲ್ಲಿ ಏನನ್ನೂ ಇಟ್ಟುಕೊಂಡಿಲ್ಲ. ಅವರು ಸ್ಪಷ್ಟವಾಗಿ ಮತ್ತು ಸತ್ಯವಾಗಿ ಮಾತನಾಡುತ್ತಿದ್ದರು. ನಮಾಝ್, ಉಪವಾಸ, ಪವಿತ್ರ ಖುರ್‌ಆನ್‌ನ ಪಠಣ, ಖಲೀಫತ್‌ನೊಂದಿಗೆ ಅಪಾರ ಸಂಪರ್ಕ ಮತ್ತು ಪ್ರೀತಿಯನ್ನು ಹೊಂದಿದ್ದರು. ಜಮಾತಿನ ಕೆಲಸಗಳಲ್ಲಿ ಏನು ವಹಿಸಿಕೊಟ್ಟರೂ ಅದರಲ್ಲಿ ಆಸಕ್ತಿ ವಹಿಸುತ್ತಿದ್ದರು. ಅಲ್ಲಾಹನು ಅವರನ್ನು ಕ್ಷಮೆ ಮತ್ತು ಕರುಣೆಯಿಂದ ವರ್ತಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ. ಅವರ ಪತಿ ಮತ್ತು ಮಕ್ಕಳಿಗೆ ತಾಳ್ಮೆಯನ್ನು ನಿಡಲಿ.

ಎರಡನೇ ಜನಾಝ ಫೈಸಲಾಬಾದ್‌ನ ಕೃಷಿ ವಿಶ್ವವಿದ್ಯಾಲಯದಲ್ಲಿ ಮಾಜಿ ಉಪ ರಿಜಿಸ್ಟಾರ್ ಆಗಿದ್ದ ಚೌಧರಿ ರಶೀದ್ ಅಹ್ಮದ್ ಸಾಹಿಬ್ ಅವರದ್ದಾಗಿದೆ. ಅವರು ಪ್ರಸ್ತುತ ಅಮೆರಿಕದಲ್ಲಿದ್ದರು. ಕಳೆದ ಕೆಲವು ದಿನಗಳ

ಮುಂಚೆ ನಿಧನ ಹೊಂದಿದ್ದಾರೆ **ಇನ್ನಾ ಲಿಲ್ಲಾಹಿ ವ ಇನ್ನಾ ಇಲಹಿ ರಾಜಿಊನ್**. ಇವರು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಲಾಸ್ ಏಂಜಲೀಸ್‌ನಲ್ಲಿ ಜಮಾಅತ್‌ನ ಸೇವೆ ಸಲ್ಲಿಸುತ್ತಿರುವ ಅವರ ಪುತ್ರ ರಫೀಕ್ ತಾಹಿರ್ ಸಾಹಿಬ್ ಹೇಳುತ್ತಾರೆ, ನಮ್ಮ ಕುಟುಂಬದಲ್ಲಿ ಅಹ್ಮದಿಯತ್ ಅವರ ಹಿರಿಯ ಸಹೋದರ ಚೌಧರಿ ಬರ್ಕತ್ ಅಲಿ ಸಾಹಿಬ್ ಅವರಿಂದ ಬಂದಿತು. ಮತ್ತು ನಂತರ ಅವರ ತಂದೆ ಮತ್ತು ಕುಟುಂಬದ ಉಳಿದವರು ಬೈಅತ್ ಮಾಡಿದರು. 1974 ರ ಗಲಭೆಯಲ್ಲಿ, ಅವರ ಮನೆ ವಿಶ್ವವಿದ್ಯಾನಿಲಯದ ಕ್ವಾರ್ಟರ್ಸ್‌ನಲ್ಲಿದ್ದರೂ ಒಂದು ಗುಂಪು ದಾಳಿ ಮಾಡಿ ಅವರ ಎಲ್ಲಾ ವಸ್ತುಗಳನ್ನು ದೋಚಿತು. ಆದಾಗ್ಯೂ, ಅವರು ಆ ಸಮಯದಲ್ಲಿ ಹೊರಟು ಎರಡು ಅಥವಾ ಮೂರು ತಿಂಗಳ ನಂತರ ಪರಿಸ್ಥಿತಿ ಸುಧಾರಿಸಿದಾಗ ವಿಶ್ವವಿದ್ಯಾಲಯಕ್ಕೆ ಮರಳಿದರು. ಕ್ರೆಸೆಂಟ್ ಮಿಲ್‌ನ ಮಾಲೀಕರು ನಿಮ್ಮ ನಷ್ಟವನ್ನು ಸರಿದೂಗಿಸಲು ಬಯಸುತ್ತೇನೆ ಎಂದು ಉಪಕುಲಪತಿ ಹೇಳಿದರು. ಎಷ್ಟು ಹಾನಿಯಾಗಿದೆ ಹೇಳಿ? ಅದಕ್ಕೆ ಚೌಧರಿ ರಶೀದ್ ಸಾಹಿಬ್ ಆಕಾಶದ ಕಡೆಗೆ ಬೆರಳನ್ನು ಎತ್ತಿ ಇಲ್ಲ, ನಾನು ಯಾರಿಂದಲೂ ಸಹಾಯವನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ನಾನು ಈ ನಷ್ಟವನ್ನು ಅಲ್ಲಾಹನ ಮಾರ್ಗದಲ್ಲಿ ಭರಿಸುತ್ತಿದ್ದೇನೆ. ಈ ನಷ್ಟವು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ನನಗೆ ಸಂಭವಿಸಿದೆ ಮತ್ತು ಅಲ್ಲಾಹನು ಸ್ವತಃ ನನ್ನ ನಷ್ಟವನ್ನು ತುಂಬುತ್ತಾನೆ. ಆದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ನಂತರ ಎಂತಹ ಅನುಗ್ರಹವನ್ನು ನೀಡಿದನು ಎಂದರೆ ಎಲ್ಲಾ ಹಾನಿಯನ್ನು ಬಹಳ ಕಡಿಮೆ ಸಮಯದಲ್ಲಿ ಸರಿದೂಗಿಸಿದನು. ಖಿಲಾಫತ್ ಜೊತೆ ಅಪಾರ ಪ್ರೀತಿ ಮತ್ತು ವಿಧೇಯತೆಯ ಸಂಬಂಧವಿತ್ತು. ಅವರು ಆದೇಶಗಳನ್ನು ಪದದ ಮೂಲಕ ಪೂರೈಸಲು ಪ್ರಯತ್ನಿಸುತ್ತಿದ್ದರು. ಪ್ರಾಮಾಣಿಕತೆ ಎಷ್ಟರಮಟ್ಟಿಗೆ ಇತ್ತು ಎಂದರೆ ವಿಶ್ವವಿದ್ಯಾಲಯವು ಅನುದಾನ ಆಯೋಗದ ಸದಸ್ಯರಾಗಿದ್ದರು. ಇದೂ ಕೂಡ ದೊಡ್ಡ ಗೌರವವಾಗಿದೆ. ಮತ್ತು ಒಮ್ಮೆ ಸಭೆ ಇದ್ದಾಗ ಸಭೆಗೆ ಹೋಗಲು ರೈಲು ದರಕ್ಕೆ ಎಸಿ ಟಿಕೇಟಿಗೆ ಹಣ ಸಿಕ್ಕಿತು. ವಾಪಸ್ಸು ಬರುವಾಗ ಅವರ ಸಂಬಂಧಿಕರಲ್ಲಿ ಕೆಲವರು ಒಟ್ಟಿಗೆ ಹೋಗೋಣ ಎಂದು ಹೇಳಿ ಟಿಕೆಟ್ ಬದಲಾಯಿಸಿ ಎರಡನೇ ಕ್ಲಾಸಿನಲ್ಲಿ ಸಂಬಂಧಿಕರೊಂದಿಗೆ ಹೋಗಿ ಉಳಿದ ಹಣವನ್ನು ಸರ್ಕಾರಕ್ಕೆ ಹಿಂತಿರುಗಿಸಲು ಅಧ್ಯಕ್ಷರ ಕಚೇರಿಗೆ ತೆರಳಿದರು. ಗ್ರ್ಯಾಂಟ್ ಕಮಿಷನ್ ಮಾಡಿ ಅವರನ್ನ ಭೇಟಿಯಾಗಲು ಕಾರ್ಡನ್ನು ಕಳುಹಿಸಿದರು ನಿರ್ದೇಶಕರೇ ಸ್ವತಃ ಹೊರಗೆ ಬಂದು ಅಲ್ಲೇ ಕುಳಿತಿದ್ದ ತಮ್ಮ ಗೆಳೆಯರೊಬ್ಬರಿಗೆ ಇವನೇ ನಾನು ನಿಮಗೆ ಪ್ರಾಮಾಣಿಕತೆ ಹೇಳುತ್ತಿದ್ದೇನೆ ಎಂದು ಹೇಳಿ ತಕ್ಷಣ ಪರಿಚಯಿಸಿದರು. ನಾನು ಅಹ್ಮದಿ ಎಂಬ ಜಮಾತ್‌ಗೆ ಸೇರಿದ್ದವನಾಗಿದದೇನೆ. ಅಹ್ಮದಿ ಎಂಬ ಕಾರಣಕ್ಕೆ ಇಷ್ಟೆಲ್ಲ ವಿಶ್ವಾಸಾರ್ಹತೆ ನನ್ನಲ್ಲಿ ಎಂದು ಏಳುತ್ತಿದ್ದರು. ಹೀಗಾಗಿ ಅಹ್ಮದೀಯರಿಗೂ ಇದರಲ್ಲಿ ಪಾಠವಿದೆ. ಒಬ್ಬನು ಯಾವಾಗಲೂ ತನ್ನ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಮತ್ತು ಯಾವುದೇ ರೀತಿಯ ಆರ್ಥಿಕ ದುರಾಸೆಯಲ್ಲಿ ತೊಡಗಬಾರದು.

ಚಂದ ಪಾವತಿ ಮತ್ತು ಆರ್ಥಿಕ ತ್ಯಾಗದಲ್ಲಿ ಅವರು ಪ್ರಮುಖರಾಗಿದ್ದರು. ಪೋಷಕರು, ಒಡಹುಟ್ಟಿದವರ ಹೊರತಾಗಿ ಹಝ್ರತ್ ಪೈಗಂಬರ್(ಸ), ಹಝ್ರತ್ ಮಸೀಹ್ ಮೌಊದ್(ಸ) ಅವರ ಪರವಾಗಿ ತೆಹ್ರೀಕ್ ಜದೀದ್ ಮತ್ತು ವಕ್ಫ್ ಜದೀದ್ ಚಂದವನ್ನು ನಿಯಮಿತವಾಗಿ ಚಂದಗಳನ್ನು ನೀಡಿದರು. ಅವರು ತುಂಬಾ ಪ್ರೀತಿಯ ವ್ಯಕ್ತಿತ್ವ ಹೊಂದಿದ್ದರು. ವಿಶ್ವವಿದ್ಯಾನಿಲಯದ ಎಲ್ಲ ವಿದ್ಯಾರ್ಥಿಗಳನ್ನು ಅವರು ಮಕ್ಕಳಂತೆ ಮತ್ತು ಸಹೋದರರಂತೆ ಕಾಣುತ್ತಿದ್ದರು. ಒಂದು ಪ್ರಾರ್ಥನೆ, ಮಗ್ರಿಬ್ ಪ್ರಾರ್ಥನೆ ವಿಶೇಷವಾಗಿ ನಾವೆಲ್ಲರೂ ಅವರ ಮನೆಯಲ್ಲಿ ಒಟ್ಟಿಗೆ ನಿರ್ವಹಿಸುತ್ತಿದ್ದೆವು. ಸದಾ ನಗುಮುಖದಿಂದಲೇ ಭೇಟಿಯಾಗುತ್ತಿದ್ದರು. ಅವರು ಮಹಾನ್ ದೃಢವಿಶ್ವಾಸದ ವ್ಯಕ್ತಿಯಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

... * ... * ...

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರಿಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರಿಕ್ಷೆಯು ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ–1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ–2:** ಕಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝ್ಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ–3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ–4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ–5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತೆಹ್ರೀಕೆ ಜದೀದ್, ಅಂಜುಮನ್ ವಖ್‌ಫೆ ಜದೀದ್ ಖಾದಿಯಾನ್‌ನಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು**

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ (3) ಜನನ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ (6) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (7) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ (8) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ. **(ಗಮನಿಸಿ:** ಸಂದರ್ಶನದ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516
ಮೊಬೈಲ್: 09682627592, 09682587713,
ಕಛೇರಿ: 01872–501130
ಇ–ಮೇಲ್: diwan@qadian.in

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪುಟ–133, ಅಡಿಟಿಪ್ಪಣಿ)

ಸಯ್ಯಿದ್ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಕನಸನ್ನು ಆಯಿನಾ ಕಮಾಲಾತೆ ಇಸ್ಲಾಮ್‌ನಲ್ಲಿ ಹೀಗೆ ವಿವರಿಸಿದ್ದಾರೆ ಅಲ್ಲಿಯೇ ಅದರ ವ್ಯಾಖ್ಯಾನವನ್ನು ಕನಸ್ಸಿನಲ್ಲಿ ದೇವರನ್ನು ಕಂಡರೆ ಏನು ಎಂದು ಹೇಳಿದದಾರೆ. ಅವರು ಹೇಳುತ್ತಾರೆ:

ಅನುವಾದ:: ಮತ್ತು ನಾವು ಈ ಘಟನೆಯನ್ನು ಅಂದರೆ ಕನಸ್ಸಿನಿಂದ ವಹ್ದತ್ ಅಲ್–ವುಜೂದ್ ಅವರ ಅನುಯಾಯಿಗಳು ತಮ್ಮ ಪುಸ್ತಕಗಳಲ್ಲಿ ಅರ್ಥೈಸುವಂತೆ ಅರ್ಥ ಮಡಿಕೊಳ್ಳುವುದಿಲ್ಲ. ಅಥವಾ ನಾವು ಹಲುಲಿಯನ್ನರ ಧರ್ಮ ಅರ್ಥೈಸಿಕೊಳ್ಳುವಂತೆ ಅರ್ಥ ಮಾಡಿಕೊಳ್ಳುವುದಿಲ್ಲ. ಬದಲಿಗೆ ಈ ಘಟನೆಯನ್ನು ಹಝ್ರತ್ ಪೈಗಂಬರ್(ಸ) ರವರ ಆ ಹದೀಸಿನಂತಿದೆ, ಕರ್ಬ್ ನವಾಫಿಲ್‌ನಲ್ಲಿ ನೀತಿವಂತ ಸೇವಕರಿಗಾಗಿ ಬುಖಾರಿಯಲ್ಲಿ ಬಂದ ಹದೀಸ್‌ಗೆ ಹೋಲುತ್ತದೆ.

ಸಯ್ಯಿದ್ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಾನು ಯಾವುದೇ ಬಣ್ಣದಲ್ಲಿ ದೇವರೆಂದು ಹೇಳಿಕೊಳ್ಳುವುದಿಲ್ಲ ಎಂದು ವಿವರಿಸಿದರು, ಆದರೂ ಅವರು ದೇವರೆಂದು ಹೇಳಿಕೊಳ್ಳುವುದನ್ನು ಆಕ್ಷೇಪಿಸಲು, ಎಂತಹ ದೊಡ್ಡ ಅನ್ಯಾಯ ಮತ್ತು ಎಷ್ಟು ದೊಡ್ಡ ಸುಳ್ಳು ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉಲ್ಲೇಖಿಸಿರುವ ನವಾಫಿಲ್‌ಗೆ ಸಮೀಪವಿರುವ ಬುಖಾರಿಯ ಹದೀಸ್ ಹೀಗಿದೆ:

عَنْ اَبِیْ هُرَيْرَةَ رَضِیَ اللهُ عَنْهُ قَالَ : قَالَ رَسُوْلُ اللهِ صَلَّى اللهُ عَلَيْهِ وَسَلَّمَ : اِنَّ اللهَ تَعَالٰی قَالَ : مَنْ عَادٰى لِیْ وَلِيًّا فَقَدْ اٰذَنْتُهٗ بِالْحَرْبِ، وَمَا تَقَرَّبَ اِلَیَّ عَبْدِیْ بِشَیْءٍ اَحَبَّ اِلَیَّ مِمَّا افْتَرَضْتُ عَلَيْهِ وَمَا يَزَالُ عَبْدِیْ يَتَقَرَّبُ اِلَیَّ بِالنَّوَافِلِ حَتّٰى اُحِبَّهٗ فَاِذَا اَحْبَبْتُهٗ كُنْتُ سَمْعَهُ الَّذِیْ يَسْمَعُ بِهٖ وَبَصَرَهُ الَّذِیْ يُبْصِرُ بِهٖ وَيَدَهُ الَّتِیْ يَبْطِشُ بِهَا وَرِجْلَهُ الَّتِیْ يَمْشِیْ بِهَا وَاِنْ سَاَلَنِیْ لَاُعْطِيَنَّهٗ وَلَئِنِ اسْتَعَاذَنِیْ لَاُعِيْذَنَّهٗ ۔ (بخاری کتاب الرقاق باب التواضع)

ಹಝ್ರತ್ ಅಬೂ ಹುರ್ರೈರ(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಹನು ನುಡಿಯುತ್ತಾನೆ ಯಾರು ನನ್ನ ಸ್ನೇಹಿತನೊಂದಿಗೆ ದ್ವೇಷ ಸಾಧಿಸುತ್ತಾರೋ, ನಾನು ಅವನ ವಿರುದ್ಧ ಯುದ್ಧವನ್ನು ಘೋಷಿಸುತ್ತೇನೆ. ನಾನು ಇಷ್ಟಪಡುವ ಮತ್ತು ನಾನು ಅವನಿಗೆ ಆಜ್ಞಾಪಿಸಿದ ವಿಷಯದಿಂದ ನನ್ನ ಸೇವಕನು ನನಗೆ ಹತ್ತಿರವಾಗಬಲ್ಲನು, ಅವನು ಬೇರೆ ಯಾವುದರಿಂದಲೂ ಪಡೆಯಲಾರನು, ಮತ್ತು ನವಾಫಲ್ ಮೂಲಕ ನನ್ನ ಸೇವಕನು ನನಗೆ ಹತ್ತಿರವಾಗುವವರೆಗೆ ನಾನು ಅವನನ್ನು ಪ್ರೀತಿಸಲು ಪ್ರಾರಂಭಿಸುತ್ತೇನೆ. ಮತ್ತು ನಾನು ಅವನನ್ನು ನನ್ನ ಸ್ನೇಹಿತನನ್ನಾಗಿ ಮಾಡಿದಾಗ, ನಾನು ಅವನ ಕಿವಿಯಾಗುತ್ತೇನೆ, ಅದರ ಮೂಲಕ ಅವನು ಕೇಳುತ್ತಾನೆ, ಅವನು ನೋಡುವ ಅವನ ಕಣ್ಣುಗಳಾಗುತ್ತೇನೆ, ಅವನು ಹಿಡಿದಿರುವ ಅವನ ಕೈಯಾಗುತ್ತೇನೆ, ಅವನ ಪಾದಗಳಾಗುತ್ತೇನೆ. ಅವನು ನನ್ನನ್ನು ಕೇಳಿದರೆ, ನಾನು ಅವನಿಗೆ ಕೊಡುತ್ತೇನೆ ಮತ್ತು ಅವನು ನನ್ನಿಂದ ಆಶ್ರಯ ಪಡೆದರೆ ನಾನು ಅವನಿಗೆ ಆಶ್ರಯ ನೀಡುತ್ತೇನೆ.
(ಬುಖಾರಿ ಕಿತಾಬುರ್ರ ಖಾಖ್)

ಅಲ್ಲಾಹನ ಒಳ್ಳೆಯ ದಾಸರು ಅಲ್ಲಾಹನ ಪ್ರೀತಿಯಲ್ಲಿ ನಶಿಸಿಹೋದಾಗ, ಅಲ್ಲಾಹನು ಅವರ ಕಿವಿ, ಅವರ ಕಣ್ಣು ಮತ್ತು ಅವರ ಕೈ ಮತ್ತು ಪಾದಗಳ ಸ್ಥಾನವನ್ನು ಪಡೆಯುತ್ತಾನೆ ಎಂದು ಪ್ರವಾದಿ(ಸ) ಹೇಳುತ್ತಾರೆ. ಈ ಸ್ಥಳದ ಬಗ್ಗೆ ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಕವಿತೆಯಲ್ಲಿ ಹೇಳುತ್ತಾರೆ:

**ಸರ್ ಸೆ ಮೆರೆ ಪಾವೊಂ ತಕ್ ವೋಹ್ ಯಾರ್ ಮುಜ್ ಮೆ ಹೈ ನಿಹಾಂ,**

**ಅಯ್ ಮೆರೆ ಬದ್ ಖ್ವಾಹ್ ಕರ್‌ನಾ ಹೋಶ್ ಕರ್ ಕೆ ಮುಜ್ ಪೆ ವಾರ್**

ಈ ಸಂದರ್ಭದ ಬಗ್ಗೆ ಹಝ್ರತ್ ಶೇಖ್ ಅಬ್ದುಲ್ ಖಾದಿರ್ ಜೀಲಾನಿ(ರಹ್) ಹೇಳುತ್ತಾರೆ:

"ಒಬ್ಬರ ಗುಣಲಕ್ಷಣಗಳ ವಿನಾಶದ ಸ್ಥಳವಾದ ನವಾಫಿಲ್‌ನ ಸಾಮೀಪ್ಯದ ಅವಧಿಯು ಸಂಶೋಧಕರ ಪ್ರಕಾರ ಅನ;ಲ್ ಹಖ್‌ನ ಸಾಕ್ಷಿಯನ್ನು ಸೃಷ್ಟಿಸುತ್ತದೆ." (ಫತೂಹುಲ್ ಗೈಬ್ ಫಾರ್ಸಿ ಮಖಾಲ ಸಂಖ್ಯೆ–3, ಪುಟ–17)

ಶೇಖ್ ಫರಿದುದ್ದೀನ್ ಅತ್ತಾರ್(ರಹ್) ಹೇಳುತ್ತಾರೆ:

ಮನ್ ಖುದಾ ಏಮ್ ಮನ್ ಖುದಾ ಏಮ್ ಮನ್ ಖುದಾ,
ಫಾರಗ್ ಅಝ್ ಕೀನ ವಾಝ್ ಕಿಬ್ರೊ ಹವಾ.

ಅಂದರೆ: ನಾನು ದ್ವೇಷ ಮತ್ತು ಅಹಂಕಾರ ಮತ್ತು ದುರಾಶೆಯಿಂದ ಪ್ರತ್ಯೇಕಿಸುತ್ತೇನೆ ಮತ್ತು ನಾನೇ ದೇವರು, ನಾನೇ ದೇವರು, ನಾನೇ ದೇವರು ಎಂದು ಹೇಳುತ್ತೇನೆ. (ಫವ್ಯೆದ್ ಫರೀದಾ, ಭಾಷಾಂತರಕಾರ, ಬರ್ ಅವ್ವಲ್, ಪುಟ–85, ಮುಯಿನ್–ಉಲ್–ಅದಬ್ ಮಕ್ತಬ, ಜಾಮಿಯಾ ಮಸೀದಿ ಷರೀಫ್, ದೇರಾ ಘಾಜಿ ಖಾನ್)

ಕನಸಿನಲ್ಲಿ ದೇವರನ್ನು ನೋಡುವುದು ಶರಿಯತ್ ವಿರುದ್ಧವಲ್ಲ. ಇದನ್ನು ಯಾರಾದರೂ ನೋಡಿದರೆ ಅದರ ವ್ಯಾಖ್ಯಾನ ಏನಾಗಬಹುದು ಎಂದು ಮುನ್ಸಿಫ್ ಸಂಪಾದಕರ ಅರಿವಿಗೆ ನಾವೂ ಬರೆಯುತ್ತೇವೆ. ತಅ್‌ತೀರುಲ್ ಅನಾಮ್ ಫೀ ತಅ್‌ಬೀರುಲ್ ಮನಾಮ್, ಅಲ್ಲಾಮ ಸಯ್ಯದ್ ಅಬ್ದುಲ್ ಗನಿ ಅಲ್‌ನಾಬ್ಲಸಿಯಲ್ಲಿ ಹೀಗೆ ಬರೆಯಲಾಗಿದೆ: **ಮನ್ ರೈ ಫಿಲ್ ಮನಾಮ್ ಕಅನ್ನಹೂ ಸಾರಲ್ ಹಖ್ಖ ಸುಬ್‌ಹಾನಹೂ ತಆಲಾ ಇಹ್‌ತದಾ ಇಲಸ್ಸಿರಾತಲ್ ಮುಸ್ತಖೀಮ್** ಅಂದರೆ ಒಬ್ಬ ವ್ಯಕ್ತಿಯು ಕನಸಿನಲ್ಲಿ ನೋಡಿದರೆ ಅವನು ದೇವರಾಗಿದ್ದಾನೆ ಎಂದರೆ ಅವನು ಸರಿಯಾದ ಹಾದಿಯಲ್ಲಿದ್ದಾನೆ ಎಂದರ್ಥ.
(ಈ ಉಲ್ಲೇಖವು ತತೀರ್ ಅಲ್–ಅನಾಮ್, ಮುತಾಬ್ ಹಿಜಾಜಿ ಕೈರೋದ ಪ್ರಕಟಿತ ಆವೃತ್ತಿಯ 90 ನೇ ಪುಟದಲ್ಲಿದೆ)

ಮೇಲಿನ ವಿವರಣೆಯಿಂದ ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನೇರ ಮಾರ್ಗದಲ್ಲಿದ್ದಾರೆ ಮತ್ತು ಅವರ ವಿರೋಧಿಗಳು ನೇರ ಮಾರ್ಗದಲ್ಲಿಲ್ಲ ಎಂದು ಸ್ಪಷ್ಟವಾಗುತ್ತದೆ ಏಕೆಂದರೆ ನೇರ ಮಾರ್ಗವನ್ನು ವಿರೋಧಿಸುವವನು ನೇರ ಮಾರ್ಗದಲ್ಲಿ ಇರಲು ಸಾಧ್ಯವಿಲ್ಲ. ಯಾರಾದರೂ ಇದ್ದರೆ ಇತರ ಉಲ್ಲೇಖಗಳಿವೆ. ಖಾಜಿ ಮೊಹಮ್ಮದ್ ನಜೀರ್ ಸಾಹಿಬ್ ಲಿಯಾಲ್‌ಪುರಿ ಅವರ "ಅಹ್ಮದಿಯಾ ಶಿಕ್ಷಣ ಪಾಕೆಟ್ ಬುಕ್" ಮತ್ತು ಖಾಲಿದ್ ಅಹ್ಮದಿಯಿತ್ ಮಲಿಕ್ ಅಬ್ದುಲ್ ರಹಮಾನ್ ಖಾದಿಮ್ ಸಾಹಿಬ್ ಅವರ "ಮುಕಮ್ಮಲ್ ತಬ್ಲೀಘಿ ಪಾಕೆಟ್ ಬುಕ್" ಅನ್ನು ಒಬ್ಬರು ಓದಬಹುದು. **(ಮನ್ಸೂರ್ ಅಹ್ಮದ್ ಮಸ್ರೂರ್)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ[ರ])

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

## ಕಳೆದ ತಿಂಗಳು ನಝ್ರತ್ ನಶಾರ್–ವ–ಇಶಾಅತ್ ಖಾದಿಯಾನ್ ಪ್ರಕಟಿಸಿದ ಪುಸ್ತಕ

**ಖೈದಾ ಯಸ್ಸರ್‌ನಲ್ ಖುರ್‌ಆನ್**
**ಲೇಖಕರು: ಸಾಹಿಬ್‌ಝಾದಾ ಪೀರ್ ಮಂಝೂರ್ ಮುಹಮ್ಮದ್ ಸಾಹಿಬ್[ರ]**

**ಖೈದಾ** ಯಸ್ಸರ್‌ನಲ್ ಖುರ್‌ಆನ್ ಒಂದು ಸುಪ್ರಸಿದ್ಧ ಖೈದಾ ಆಗಿದೆ. ಇದು 1904 ರಿಂದ ಬಳಕೆಯಲ್ಲಿದೆ. ಈ ಖೈದಾದಿಂದ, ಮಗು ಪವಿತ್ರ ಖುರ್‌ಆನ್ ಅನ್ನು ಓದಲು ಕಲಿಯುತ್ತದೆ. ಈ ಖೈದಾದಲ್ಲಿ, ಖುರ್‌ಆನ್ ಷರೀಫ್ ಅನ್ನು ಓದುವ ಎಲ್ಲಾ ನಿಯಮಗಳನ್ನು ಉಲ್ಲೇಖಿಸಲಾಗಿದೆ. ಲೇಖಕರು ತಮ್ಮ ಬರವಣಿಗೆಯ ಜೊತೆಗೆ ಅಂತಹ ಬರವಣಿಗೆಯ ಶೈಲಿಯನ್ನು ಕಂಡುಹಿಡಿದಿದ್ದಾರೆ ಎಂದರೆ ಆ ಖೈದಾವನ್ನು ಓದುವವರಿಗೆ ಯಾವುದೇ ತಪ್ಪು ಕಾಣದ ರೀತಿಯಲ್ಲಿ ಅಕ್ಷರಗಳನ್ನು ಮತ್ತು ಏರಾಬ್‌ಗಳನ್ನು ಬರೆದಿದ್ದಾರೆ. ಹೊಸ ತಂತ್ರಜ್ಞಾನದ ಕಾರಣದಿಂದ ಈಗ ಸುಂದರ ಶೀರ್ಷಿಕೆಗಳು ಮತ್ತು ಅಲಂಕೃತ ಬರವಣಿಗೆಯೊಂದಿಗೆ ಸಂಯೋಜಿಸಲಾಗಿದೆ ಮತ್ತು ಪ್ರಕಟಿಸಲಾಗಿದೆ.

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."
***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್[ಸ])

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 14 Deceember 2023, Issue No. 50

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ–49ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರೆ ಅನ್ವರ್(ಅತಬಿಅ) ಅವರ ಈ Zion ಪ್ರವಾಸ ಮತ್ತು ಫತಹ ಅಝೀಮ್ ಕುರಿತು ಒಂದು ನಿಬಂಧ ಪ್ರಕಟಿಸಿತು. ಅದರ ಶೀರ್ಷಿಕೆ "To prophets, century old prayer duel inspire zion mosque" ಎಂದರೆ "ಎರಡು ಪ್ರವಾದಿಗಳ ಮಧ್ಯೆ ಶತಮಾನಗಳಷ್ಟು ಹಳೆಯ ಮುಬಾಹಲ, Zion ಮಸೀದಿಯ ಮುನ್ನುಡಿಯಾಗಿದೆ.

ಈ ಸುದ್ದಿ ಮಾಧ್ಯಮದ website ಅನ್ವಯ ಸುಮಾರು ಪ್ರಪಂಚದ ಅರ್ಧದಷ್ಟು ಜನಸಂಖ್ಯೆ ಇದರ ಓದುಗರರಾಗಿದ್ದಾರೆ.

ಇದಾದ ನಂತರ ಈ ನಿಂಬಂಧ ಒಟ್ಟು ಲೋಕದ 13 ರಾಷ್ಟ್ರಗಳ 412 Outlets ಮತ್ತು ವಾರ್ತಾ ಪತ್ರಿಕೆಗಳಲ್ಲಿ ಸೇರಿತು, ಅದರಲ್ಲಿ ಈ ಪ್ರಬಂಧ (Wasington post) ABC News ಟೋರಂಟೊ ಸ್ಟಾರ್, The Hill ಮತ್ತು ಇತರ ಹಲವು ಪ್ರಸಿದ್ಧ ಪತ್ರಿಕೆಗಳಾಗಿವೆ. ಈ Associated press ನ ಹತ್ತು Top ಪ್ರಸಿದ್ಧ ಪ್ರಬಂಧಗಳಲ್ಲಿ ಒಂದಾಗಿತ್ತು.

ಈ ಪ್ರಬಂಧದಲ್ಲಿ ಹೇಳಲಾಗಿದೆ. "Zion ನಲ್ಲಿ 115 ವರ್ಷಗಳ ಹಿಂದೆ ಒಂದು ಪವಿತ್ರವಾದ ಪವಾಡ ಜರುಗಿತ್ತು. ಲೋಕದ ಲಕ್ಷಾಂತರ ಅಹ್ಮದಿ ಮುಸಲ್ಮಾನರು ಇದರ ಮೇಲೆ ವಿಶ್ವಾಸ ಹೊಂದಿರುತ್ತಾರೆ. ಅಹ್ಮದಿಯರು ಈ ಸಣ್ಣದಾದ ನಗರ ಅದು ಶಿಕಾಗೋದಿಂದ 40 ಮೈಲಿಯಷ್ಟು ದೂರದಲ್ಲಿ ಉತ್ತರದಲ್ಲಿ Michigan ಸರೋವರದ ದಂಡೆಯ ಮೇಲಿದೆ. ಧಾರ್ಮಿಕ ನೆಲೆಯಲ್ಲಿ ಇದಕ್ಕೆ ತುಂಬಾ ಮಹತ್ವ ನೀಡುತ್ತಾರೆ.

ಈ ನಗರದೊಂದಿಗೆ ಅಹ್ಮದಿ ಜಮಾಅತಿನ ಸಂಬಂಧ ಒಂದು ಶತಮಾನದಷ್ಟು ಹಿಂದೆ ಮುಬಾಹಲ ಮತ್ತು ಒಂದು ಭವಿಷ್ಯವಾಣಿಯಿಂದ ಪ್ರಾರಂಭವಾಗಿತ್ತು.

Zion ನಗರ ಅಡಿಪಾಯ 1900 ರಲ್ಲಿ ಓರ್ವ ಮಸೀಹಿ ಥಿಯೊಕ್ರಿಸಿಯ ನೆಲೆಯಲ್ಲಿ ಜಾನ್ ಅಲೆಕ್ಸಾಂಡರ್ ಡೂಯಿ ಇಟ್ಟಿದ್ದರು. ಅವರು ಒಬ್ಬ Evange list ಆಗಿದ್ದರು. ಅವರು ಪ್ರಾರಂಭಿಕ Pentecostal ಪ್ರಚಾರಕರಾಗಿದ್ದರು. ಅಹ್ಮದಿಯರ ವಿಶ್ವಾಸವಿದೆ. ಅವರ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಡೂಯಿಯ ಇಸ್ಲಾಂ ಧರ್ಮದ ವಿರುದ್ಧ ಬಳಸಿದ ಅಪಶಬ್ಧಗಳ ಮತ್ತು ಪ್ರತಿವಾದಿಗಳ ರಕ್ಷಣೆಗಾಗಿ ಇಸ್ಲಾಂ ಧರ್ಮವನ್ನು ಪ್ರಸ್ತುತಪಡಿಸಿದರು. ಮತ್ತು ಕೇವಲ ಪ್ರಾರ್ಥನೆಗಳ ಆಯುಧಗಳನ್ನು ಬಳಸಿ ಈ ಆಧ್ಯಾತ್ಮಿಕ ಯುದ್ಧದಲ್ಲಿ ಅವರನ್ನು ಸೋಲಿಸಿದರು.

Zion ನಗರದ ಸುಮಾರು ಎಲ್ಲಾ ಈಗಿನ ಜನರಿಗೆ ಈ ಹಳೆಯ ಕಾಲದ ಪವಿತ್ರ ಯುದ್ಧದ ಬಗ್ಗೆ ತಿಳಿದವರಿಲ್ಲ. ಆದರೆ ಅಹ್ಮದಿಯರಿಗೆ ಅದು ಪವಿತ್ರ ಯುದ್ಧವಾಗಿದೆ. ಅದು ಈ ನಗರದೊಂದಿಗೆ ಒಂದು ಶಾಶ್ವತ ಸಂಬಂಧ ಹೊಂದುವಂತೆ ಮಾಡಿದೆ. ಲೋಕಾದ್ಯಂತದಿಂದ ಸಾವಿರಾರು ಅಹ್ಮದಿಯರು ಈ ಶತಮಾನದ ಹಳೆಯ ಪವಾಡವನ್ನು ನೆನಪಿಸಿಕೊಳ್ಳಲು ಮತ್ತು Zion ನಗರದ ಒಂದು ಐತಿಹಾಸಿಕ ಹಾಗೂ ತಮ್ಮ ವಿಶ್ವಾಸದ ಅಡಿಪಾಯವಾದ ನಗರದ ಈ ಪ್ರಥಮ ಅಹ್ಮದಿಯ ಮಸೀದಿಯ ಉದ್ಘಾಟನಾ ಸಮಾರಂಭವನ್ನು ಆಚರಿಸಲು ಇಲ್ಲಿ ನೆರೆದಿರುತ್ತಾರೆ.

ಡೂಯಿ 1847 ರಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ಜನಿಸಿದರು. ಅವರ ಕುಟುಂಬ 1860 ರಲಿ ಆಸ್ಟ್ರೇಲಿಯಾಕ್ಕೆ ಹೋಗಿತ್ತು. ಅಲಿ ಅವರು ಚರ್ಚ್‌ನ ಪಾದರಿಯಾಗಿದ್ದರು.

ಡೂಯಿ 1888 ರಲ್ಲಿ ಆಸ್ಟ್ರೇಲಿಯಾ ಬಿಟ್ಟು ಅಮೇರಿಕಾ ಹೋದರು. ಅವರು ತಮ್ಮ ಆರೋಗ್ಯ ದೆಶೆಯಿಂದ ಪ್ರಸಿದ್ಧಿ ಪಡೆದಿದ್ದರು.

ಅವರು ತಮ್ಮ ಅನುಯಾಯಿಗಳ ಹಣಕಾಸನ್ನು ಬಳಸಿ ಒಂದು ಕ್ರಿಸ್ತ Utopia ಸ್ಥಾಪಿಸುವ ಭರವಸೆಯಲ್ಲಿ Lake country illinois ನಲ್ಲಿ 6000 ಎಕರೆ ಜಮೀನು ಖರೀದಿಸಿದರು. ಈ ನಗರದ ಕಾನೂನುಗಳು, ಜೂಜು, ಸಿನಿಮಾ, ಸರ್ಕಸ್, ಸರಾಯಿ (ಮಧ್ಯ) ಮತ್ತು ತಂಬಾಕು ಸಏವನೆ ನಿಷಿದ್ಧವಾಗಿದ್ದವು. ಅವನು ಆಣೆ ಹಾಕಲು, ಉಗುಳಲು, ನೃತ್ಯ, ಹಂದಿ ಮಾಂಸ ತಿನ್ನುವುದು, Osters ಮತ್ತು Tan ಬಣ್ಣದ ಬೂಟುಗಳ ಮೇಲೆ ನಿಷೇಧ ಹೇರಿದರು. 1900 ರಲ್ಲಿ ನಿರ್ಮಿಸಿದ Shiloh Tabe nacle Zion ನ ಧಾರ್ಮಿಕ ಕೇಂದ್ರವಾಯಿತು.

ಇದು ಯಾವ ಸ್ಥಳವಾಗಿತ್ತೆಂದರೆ, ಇಲ್ಲಿ ಡೂಯಿ ತನ್ನ ಬೆಳೆಯುತ್ತಿರುವ ಬಿಳಿ ಗಡ್ಡದ ಜೊತೆಯಲ್ಲಿ Old Testament ನ ಒಂದು ಉನ್ನತ ಪದರಿಯ ಭವ್ಯ ಪ್ರಕಾಶಮಯ ವಸ್ತ್ರ ಧಾರಣೆ ಮಾಡಿ ಮುಂದಾದನು ಮತ್ತು ತನ್ನನ್ನು ತಾನು Elijah the Restore" ಎಂದು ವಾದಿಸಿದನು.

ಅವನು ಆಫ್ರಿಕನ್ ಅಮೇರಿಕಾದವರಿಗೆ Zion ನಂತರ ಹೋಗಲು ಅನುಮತಿ ನೀಡಿದನು. ಆದರೆ ಅವನು ರಾಜಕಾರಿಣಿಗಳಿಗೆ, ವೈದ್ಯರಿಗೆ ಮತ್ತು ಮುಸಲ್ಮಾನರಿಗೆ ಕಠಿಣ ಶಬ್ಧಗಳನ್ನು ಬಳಸಿದನು. ಅದು ಅವನ ಪತ್ರಿಕೆಯಿಂದ ವ್ಯಕ್ತವಾಗುತ್ತದೆ.

1902 ರಲ್ಲಿ ಡೂಯಿ ಬರೆದನು. ಪೂರ್ವದಿಂದ ಪಶ್ಚಿಮ, ಉತ್ತರದಿಂದ ದಕ್ಷಿಣದ ಜನರನ್ನು ಒಟ್ಟುಗೂಡಿಸುವುದು ನನ್ನ ಕೆಲಸವಾಗಿದೆ. ಈ ಕ್ರಿಸ್ತ ನಗರಿಯ ಜೊತೆ ಜೊತೆಯಲ್ಲಿ ಬೇರೆ ನಗರಗಳಲ್ಲೂ ಕ್ರಿಸ್ತರನ್ನು ಓಗ್ಗೂಡಿಸುವುದು ಸಹ ನನ್ನ ಕೆಲಸವಾಗಿದೆ. ಎಲ್ಲಿಯವರೆಗೆಂದರೆ ಮುಹಮ್ಮದಿ ಧರ್ಮ ಈ ಲೋಕದಿಂದ ಪರಿಪೂರ್ಣವಾಗಿ ಕೊನೆಗೊಳ್ಳಬೇಕು. ಆ ದಿನ ಬರಬೇಕಾಗಿದೆ. ಓ ಖುದಾ (ಪ್ರಭೂ) ನಮಗೆ ಆ ದಿನ ಕಾಣುವ ಭಾಗ್ಯ ದಯಪಾಲಿಸು."

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಅಧ್ಯಕ್ಷರು ತಾಹಿರ್ ಸೂಫಿ ಸಾಹಿಬ್ ಜಮಾಅತ್‌ನ ಈ ಹೊಸ ಮಸೀದಿಯ ನಿರ್ಮಾಣ ಕಂಡರು. ಡೂಯಿ ತಮ್ಮ ಇತಿಹಸದ ಒಂದು ಅಂಗವಾಗಿದ್ದಾರೆ. ಜಮಾಅತ್ ಈ ಮಸೀದಿಯ ಹೆಸರು "ಫತಹ್ ಅಝೀಮ್" ಎಂದು ಹೆಸರಿಸಿದೆ. ಅದರ ಆಂಗ್ಲ ಭಾಷೆಯ ಅರ್ಥ Great victory ಎಂದಾಗಿದೆ.

ಈ 40 ಲಕ್ಷ ಡಾಲರಿನ ಕಟ್ಟಡ ಅಹ್ಮದಿಯಾ ಜಮಾಅತ್‌ನ ಹಳೆಯ ಕೇಂದ್ರದ ಜಾಗದಿಂದ ಎರಡು ಮೈಲು ದೂರದಲ್ಲಿ ನಿರ್ಮಿಸಲಾಗಿದೆ. ಅಕ್ಟೋಬರ್‌ನಲ್ಲಿ ಉದ್ಘಾಟನೆಗೊಳ್ಳುವ ಈ ಹೊಸ ಜಾಗ ನಿರ್ಮಾಣಕ್ಕಾಗಿ ಜಮಾಅತಿನ ಅಧ್ಯಕ್ಷರು ತಾಹಿರ್ ಸೂಫಿ ಸಾಹಿಬ್ ಅಹ್ಮದಿಯ ಸಮುದಾಯದವರಿಗೆ ಶತಮಾನಗಳ ಹಿಂದೆ ಗತಿಸಿದ ಘಟನೆಗಳನ್ನು ತಿಳಿಸಿದ್ದರು. ಜಮಾಅತಿನ ಸ್ಥಾಪಕರು ಇಂಡಿಯಾಕ್ಕೆ ಸಂಬಂಧಿಸಿದವರಾಗಿದ್ದರು. ಅವರು ಡೂಯಿಯನ್ನು ಇಸ್ಲಾಂ ಧರ್ಮದ ವಿರುದ್ಧ ದ್ವೇಷದಿಂದ ತುಂಬಿದ ಪದಗಳನ್ನು ಆಲಿಸಿದಾಗ ಅವನನ್ನು ಅದರಿಂದ ದೂರವಿರಲು ತಾಕೀತು ಮಾಡಿದ್ದರು.

ಅಹ್ಮದಿಯರ ವಿಶ್ವಾಸ, ಅವರ ಸ್ಥಾಪಕರು 1835 ರಲ್ಲಿ ಜನಿಸಿದರು. ಅವರು ಓರ್ವ ಸುಧಾರಕರಾಗಿದದರು ಅವರ ಸುವಾರ್ತೆ ಇಸ್ಲಾಮಿನ ಸ್ಥಾಪಕರು ಮೊದಲೇ ತಿಳಿಸಿದ್ದರು. ಹಝುರತ್ ಮಿರ್ಝಾ ಗುಲಾಂ ಅಹ್ಮದ್ ಹಝುರತ್ ಈಸಾ (ಅ) ರವರ ಸಾದೃಶ್ಯ ರೂಪವಾಗಿದ್ದಾರೆ ಎಂಬುದು ಸಹ ಅವರ ವಿಶ್ವಾಸವಾಗಿದೆ.

ಸೂಫಿ ಸಾಹಿಬ್ ಹೇಳಿದರು. ಡೂಯಿ ಅಹ್ಮದಿಯಾ ಜಮಾಅತಿನ ಸಂದೇಶವನ್ನು ಕಡೆಗಾಣಿಸಿದಾಗ 1902 ರಲ್ಲಿ ಅವರು (ಅ) Zion ನ ಸ್ಥಾಪಕನನ್ನು "ಪ್ರಾರ್ಥನೆ ಸಮರ" ಎಂದರೆ ಮುಬಾಹಲಕ್ಕೆ ಪಂಥ್ವಾನ ನಿಡಿದರು. ನ್ಯೂಯಾರ್ಕ್ ಟ್ಯಾಮ್ ಮತ್ತು ಆ ಸಮಯದ ಇತರ ಅಮೇರಿಕಾ ವಾರ್ತೆ ಪತ್ರಿಕೆಗಳು ಈ ಪಂಥ್ವಾನವನ್ನು ಉಭಯ ಮಸೀಹರ ಮಧ್ಯದ ಯುದ್ಧ ಎಂದು ವಿವರಿಸಿದ್ದರು. ಅದು ಯಾರು ಸತ್ಯ ಪ್ರವಾದಿ ಮತ್ತು ಯರು ಮಿಥ್ಯರು ಎಂದು ತಿಳಿಯಲು ಸಾರಿದ ಯುದ್ಧವಾಗಿತ್ತು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರಹ ಮೂಲಕ ಒತ್ತಿ ಹೇಳಿದರು. ಸುಳ್ಳುಗಾರನು ಸತ್ಯವಂತನ ಜೀವನದಲ್ಲಿಯೇ ನಾಶಗೊಳ್ಳುವನು" ಎಂದು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.